ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿ ಮತ್ತು ಪಂದ್ಯಪೂರ್ವ ಸಿದ್ಧತೆಗಳನ್ನು ಕರ್ನಾಟಕ ಸರ್ಕಾರ ನೇಮಕ ಮಾಡಿರುವ ತಜ್ಞರ ಸಮಿತಿಯು ಶುಕ್ರವಾರ ಅಣಕು ಅವಲೋಕನ ಮಾಡಿತು.

14 ಮಾರ್ಚ್ 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 4 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮಹಿಳೆ ಇನ್ನು ಹೆಚ್ಚಿನ ಸಾಧನೆ ಮಾಡಬೇಕು » 2



ಹಿರಿಯ ನಾಗರಿಕರಿಗೆ ನ್ಯುಮೋನಿಯಾ ಲಸಿಕೆ ನೀಡಲು ಸಂಸದ ಡಾ||ಸಿ.ಎನ್.ಮಂಜುನಾಥ್ ಆಗ್ರಹ



ಡಿಸಿಎಂ ಡಿ.ಕೆ.ಶಿ.ಗೆ ಒಡಿಶಾ ಶಾಸಕರ ಕಾಯುವ ಹೊಣೆ » 4

# ತಂಬಾಕು ಖರೀದಿಗೆ ಮುಂದಾದ ಕೇಂದ್ರ

## ದೇವೇಗೌಡ, ಕುಮಾರಸ್ವಾಮಿ ನೇತೃತ್ವದಲ್ಲಿ ಪಿಯೂಷ್ ಗೋಯಲ್ ಭೇಟಿ | ಸಮಸ್ಯೆ ಮನವರಿಕೆ

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕವೂ ಸೇರಿ ದೇಶಾದ್ಯಂತ ತಂಬಾಕು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರ ಜೊತೆ ಮಾತುಕತೆ ನಡೆಸಿದ್ದರಿಂದ ಸೋಮವಾರದಿಂದಲೇ ತಂಬಾಕು ಖರೀದಿಗೆ ಕೇಂದ್ರ ಸರ್ಕಾರ ಮುಂದಾಗಿದೆ.

ಮಾಜಿ ಪ್ರಧಾನಿ ದೇವೇಗೌಡ ಅವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಮಾಜಿ ಸಚಿವರಾದ ಸಾ.ರಾ. ಮಹೇಶ್, ಮೈಸೂರು- ಕೊಡಗು ಸಂಸದ ಯದುವೀರ್ ಚಾಮರಾಜೇಂದ್ರ ಕೃಷ್ಣದತ್ತ ಒಡೆಯರ್, ಕೋಲಾರ ಸಂಸದ ಮಲ್ಲೇಶ್ ಬಾಬು, ಶಾಸಕರಾದ ಎ.ಮಂಜು, ಜಿ.ಡಿ. ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಮಹದೇವು, ಅಶ್ವಿನ್ ಕುಮಾರ್, ಜೆಡಿಎಸ್ ಹಿರಿಯ ಮುಖಂಡ



ಕೃಷ್ಣನಾಯಕ ಅವರು ಹಾಗೂ ವಾಣಿಜ್ಯ ಸಚಿವಾಲಯದ ಉನ್ನತ ಅಧಿಕಾರಿಗಳು ಭಾಗಿಯಾಗಿದ್ದರು.

ಸಭೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ತಂಬಾಕು ಬೆಲೆ ತೀವ್ರ ಕುಸಿತ ಕಂಡಿರುವ ಕಾರಣ ತಂಬಾಕು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಸೇರಿ ಹಲವು ಬೇಡಿಕೆಗಳು ಮತ್ತು ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಈ ವೇಳೆ ಹೆಚ್.ಡಿ.ಕುಮಾರಸ್ವಾಮಿ ಅವರು, ಸಚಿವ ಗೋಯಲ್ ಅವರಿಗೆ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟರು. ಎಲ್ಲಾ ಮನವಿಗಳನ್ನು ಸಚಿವರು ಆಲಿಸಿದರಲ್ಲದೆ, ಅವುಗಳನ್ನು ಕೂಡಲೇ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವುದಾಗಿ ಭರವಸೆ ನೀಡಿದರು.

ಈ ಬಗ್ಗೆ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರತಿಕ್ರಿಯಿಸಿ, ತಂಬಾಕು ಖರೀದಿಯಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಶಮನಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಚಿವ ಗೋಯಲ್ ಅವರು ತಮ್ಮ ಸಚಿವಾಲಯದ ಉನ್ನತ ಅಧಿಕಾರಿಗಳು ಹಾಗು ತಂಬಾಕು ಖರೀದಿಸುವ ಉದ್ಯಮದ ಪ್ರಮುಖರ ಜೊತೆ ಮಾತನಾಡಿ ಬೆಳೆಗಾರರ ನೆರವಿಗೆ ಬರುವಂತೆ ಸೂಚಿಸಿದ್ದಾರೆ. ನಮ್ಮ ಎಲ್ಲಾ ಬೇಡಿಕೆಗಳಿಗೆ ಉತ್ತಮವಾಗಿ ಸ್ಪಂದಿಸಿದ್ದಾರೆಂದು ಮಾಹಿತಿ ನೀಡಿದರು.

ಸಭೆ ನಂತರ ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಎ. ಮಂಜು ಅವರು, ಕರ್ನಾಟಕದಲ್ಲಿ 100 ದಶ ಲಕ್ಷ ಟನ್ ತಂಬಾಕು ಬೆಳೆಯಲು ತಂಬಾಕು ಮಂಡಳಿ ಅವಕಾಶ ನೀಡಿದೆ. ಈ ವರ್ಷ 80 ದಶ ಲಕ್ಷ ಟನ್ ತಂಬಾಕು ಬೆಳೆಯಲಾಗಿದೆ. ನಾವು ಬೆಳೆದ ಸೊಪ್ಪನ್ನು ಸರ್ಕಾರ ನಿರ್ಧಾರ ಮಾಡಿದ ಬೆಲೆಯಲ್ಲಿ ಖರೀದಿ ಮಾಡಬೇಕಿದೆ. ಈ ಹಿಂದೆ ಖರೀದಿ ಭರವಸೆ ನೀಡಿದ ಕಂಪನಿಗಳು ಖರೀದಿ ಮಾಡಿಲ್ಲ. ಈಗ ಬೆಳೆದ ಸೊಪ್ಪನ್ನು ಕೂಡಲೇ ಖರೀದಿ ಮಾಡಬೇಕು. ಕೇಂದ್ರ ಸರ್ಕಾರ ಇದರಲ್ಲಿ ಮಧ್ಯ ಪ್ರವೇಶ ಮಾಡಬೇಕೆಂದು ಮನವಿ ಮಾಡಿರುವುದಾಗಿ ತಿಳಿಸಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಮಾತನಾಡಿ, ಸೋಮವಾರದಿಂದ ತಂಬಾಕು ಖರೀದಿಗೆ ಸಚಿವ ಪಿಯೂಷ್ ಗೋಯಲ್ ಅವರು ಸೂಚನೆ ನೀಡಿದ್ದಾರೆ. 190 ದೇಶಗಳ

» ನಾಲ್ಕನೇ ಪುಟದಲ್ಲಿ

> ವಿದೇಶಿ ಮಾರುಕಟ್ಟೆಗಳಿಗೆ ತಂಬಾಕು ರಫ್ತು, ಹೊಸ ವಿದೇಶಿ ಮಾರುಕಟ್ಟೆಗಳ ಅನ್ವೇಷಣೆ ಸೇರಿ ಬೆಳೆಗಾರರ ಬೇಡಿಕೆಗಳಿಗೆ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪಿಯೂಷ್ ಗೋಯಲ್ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸೋಮವಾರದಿಂದಲೇ ತಂಬಾಕು ಖರೀದಿ ಆರಂಭವಾಗಲಿದೆ.
> – ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

## 33 ಶಾಸಕರೊಂದಿಗೆ ಹೈಕಮಾಂಡ್ ಭೇಟಿ

• ಪ್ರಜೋದಯ ವರದಿ

**ರಾಮನಗರ:** ರಾಜ್ಯದಲ್ಲಿ ತಲೆದೋರಿರುವ ನಾಯಕತ್ವ ಗೊಂದಲ ನಿವಾರಣೆ ಹಾಗು ಸಂಪುಟ ಪುನರ್ ರಚನೆ ಮಾಡುವಾಗ ಈಗಾಗಲೇ ಮೂರು ಸಲ ಗೆದ್ದಿರುವ 33 ಶಾಸಕರನ್ನು ಸಹ ಪರಿಗಣಿಸಬೇಕೆಂದು ಕೋರಿ ನಾನೂ ಸೇರಿ 33 ಶಾಸಕರ ನಿಯೋಗವು ಪಕ್ಷದ ಹೈಕಮಾಂಡ್ ಭೇಟಿ ಮಾಡಲಿದ್ದೇವೆಂದು ಮಾಗಡಿ ಶಾಸಕ ಹೆಚ್.ಸಿ. ಬಾಲಕೃಷ್ಣ ಅವರು ಹೇಳಿದರು.

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರ್ಕಾರ ಎರಡೂವರೆ ವರ್ಷ ಪೂರೈಸಿದೆ. ಈ ಹಿನ್ನಲೆಯಲ್ಲಿ ಸಚಿವ ಸ್ಥಾನಕ್ಕೆ ಹೊಸಬರನ್ನು ಸಹ ಪರಿಗಣಿಸಬೇಕು. 2028ರಲ್ಲೂ ಪಕ್ಷ ಅಧಿಕಾರಕ್ಕೆ ಬರಬೇಕಾದರೆ ನಾಯಕತ್ವದ ವಿಷಯದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಈ ಕುರಿತು ಮನವರಿಕೆ ಮಾಡಲು ಅಧಿವೇಶನದ ಬಳಿಕ, 33 ಶಾಸಕರು ದೆಹಲಿಗೆ ಹೋಗುತ್ತೇವೆಂದರು.

ನಾನು ಸಚಿವ ಸ್ಥಾನದ ಆಕಾಂಕ್ಷಿ, ಐದು ಸಲ ಗೆದ್ದಿದ್ದೇನೆ. ಆದರೆ, ಮೂರು ಪಕ್ಷದಲ್ಲಿ ಗೆದ್ದಿರುವುದೇ ದುರಂತ. 3 ಸಲ ಜೆಡಿಎಸ್, ಉಳಿದಂತೆ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ತಲಾ ಒಂದೊಂದು ಸಲ ಗೆದ್ದಿರುವೆ. ಒಂದೇ ಪಕ್ಷದಲ್ಲಾಗಿದ್ದರೆ ಇಷ್ಟೊತ್ತಿಗೆ ಸಚಿವನಾಗಿರುತ್ತಿದ್ದೆ ಎಂದರು.

## ಮೆಗಾ ಡೇರಿ ಉದ್ಘಾಟನೆಗೆ ಆಗಮಿಸಲು ಪ್ರಧಾನಿ ಒಪ್ಪಿಗೆ

- ಮೇ 20 ನಂತರ ದಿನಾಂಕ ನಿಗದಿ
- ಕೇಂದ್ರ ಸಚಿವರು, ಮುಖ್ಯಮಂತ್ರಿಗೂ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ನಿರ್ಮಾಣಗೊಂಡಿರುವ ಮೆಗಾ ಡೇರಿ ಉದ್ಘಾಟನೆಗೆ ಆಗಮಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಒಪ್ಪಿಗೆ ಸೂಚಿಸಿದ್ದಾರೆ. ಮೇ 20ರ ನಂತರ ದಿನಾಂಕ ನಿಗದಿಪಡಿಸಲಾಗುವುದೆಂದು ಹಾಮೂಲ್ ಅಧ್ಯಕ್ಷ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಜೊತೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಹಾಗು ರಾಜ್ಯಗಳ ಹೈನುಗಾರಿಕೆ, ಸಹಕಾರ ಸಚಿವರನ್ನು ಆಹ್ವಾನಿಸಲು ಇಂದು ನಡೆದ ಒಕ್ಕೂಟದ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ



ಎಂದು ತಿಳಿಸಿರು.

66 ಎಕರೆ ಕೈಗಾರಿಕಾ ಪ್ರದೇಶದಲ್ಲಿ 810 ಕೋ.ರೂ. ವೆಚ್ಚದಲ್ಲಿ ಮೆಗಾ ಡೇರಿ ನಿರ್ಮಾಣ ಕಾಮಗಾರಿ 2017-18 ನೇ ಸಾಲಿನಲ್ಲಿ ಆರಂಭವಾಯಿತು. ಈಗ ಬಹುತೇಕ ಮುಕ್ತಾಯ ಹಂತಕ್ಕೆ ಬಂದಿದೆ. ದಿನಕ್ಕೆ 10 ಲಕ್ಷ ಲೀಟರ್ ಹಾಲು ಸಂಸ್ಕರಣೆ ಮಾಡಬಹುದು. ಮುಂದೆ 15 ಲಕ್ಷ ಲೀಟರ್‌ಗೆ ಹೆಚ್ಚಿಸಬಹುದಾಗಿದೆ. 2 ಲಕ್ಷ ಲೀಟರ್ ಹಾಲು ಪ್ಯಾಕಿಂಗ್, 1 ಲಕ್ಷ ಲೀಟರ್ ಮೊಸರು, ದಿನಕ್ಕೆ 40 ಟನ್ ಬೆಣ್ಣೆ, 10 ಟನ್ ತುಪ್ಪ ತಯಾರಿಕೆ ಮಾಡಬಹುದೆಂದು ತಿಳಿಸಿದರು.

ಮೇಗಾ ಡೇರಿ ನಿರ್ಮಾಣಕ್ಕೆ ಹಾಸನ ಹಾಲು ಒಕ್ಕೂಟದಿಂದ 400 ಕೋ.ರೂ. ತೊಡಗಿಸಲಾಗಿದೆ. ಎನ್‌ಡಿಡಿಬಿಯಿಂದ 350 ಕೋ. ರೂ. ಸಾಲ

» ನಾಲ್ಕನೇ ಪುಟದಲ್ಲಿ

## ನ್ಯಾಯಯುತ ಬೆಲೆಗೆ ಆಗ್ರಹ: ತಂಬಾಕು ಬೇಲ್‌ಗೆ ಬೆಂಕಿ ಹಚ್ಚಿ ಆಕ್ರೋಶ



• ಪ್ರಜೋದಯ ವರದಿ

**ಕೊಣನೂರು:** ತಂಬಾಕಿಗೆ ನ್ಯಾಯಯುತ ಬೆಲೆ ನೀಡದೆ ಬೆಳೆಗಾರರಿಗೆ ಮೋಸ ಮಾಡಲಾಗುತ್ತಿದೆ ಎಂದು ಆರೋಪಿಸಿ ಶುಕ್ರವಾರ ಮಾರಾಟಕ್ಕೆ ತಂದಿದ್ದ ಪದಾರ್ಥವನ್ನು ಸುಟ್ಟು ಪ್ರತಿಭಟನೆ ನಡೆಸಲಾಯಿತು.

ಅರಕಲಗೂಡು ತಾಲ್ಲೂಕು ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಗೆ ಬಂದಿದ್ದ ಬೆಳೆಗಾರರು ಮೊದಲು ಮಂಡಳಿ ಅಧಿಕಾರಿಗಳೊಂದಿಗೆ ಮಾತುಕತೆಗೆ ಮುಂದಾದರು. ಸಮಸ್ಯೆ ಇತ್ಯರ್ಥವಾಗದ ಹಿನ್ನಲೆ ಮುಖ್ಯ ರಸ್ತೆಗೆ ತಂಬಾಕು ಬೇಲ್ ತಂದು ಸುರಿದು ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿ ಪ್ರತಿಭಟಿಸಿದರು.

ಲಾಭದ ಆಸೆಯಿಂದ ಸಾಲ ಮಾಡಿ ತಂಬಾಕು ಬೆಳೆ ಕೈ ಗೊಳ್ಳಲಾಗಿದೆ. ಕೇಂದ್ರ ಸರ್ಕಾರ ತಂಬಾಕಿಗೆ ಶೇ.40 ರಷ್ಟು ಜಿಎಸ್‌ಟಿ ವಿಧಿಸಿದ್ದರಿಂದ ಹರಾಜು ಪ್ರಕ್ರಿಯೆ ಸಂಪೂರ್ಣ ಸ್ಥಗಿತಗೊಂಡಿತ್ತು. ನಂತರ ಜಿಎಸ್‌ಟಿ ನಿರ್ಧಾರದಿಂದ ಹಿಂದೆ ಸರಿಯಲಾಯಿತಾದರೂ ಮಾರುಕಟ್ಟೆ ಸಹಜ ಸ್ಥಿತಿಗೆ ಬಂದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಲ್‌ಗೆ 150 ರೂ. ನಿಗದಿ ಮಾಡಿದ್ದಾರೆ. ಬೆಳೆಗಾರರು ಈ ಸಂಬಂಧ ಅಧಿಕಾರಿಗಳನ್ನು ಪ್ರಶ್ನಿಸಿದ ಬಳಿಕ 270 ರೂ. ನಿಗದಿಪಡಿಸಿದ್ದಾರೆ. ಒಂದು ವೇಳೆ ಪ್ರಶ್ನೆ ಮಾಡದಿದ್ದರೆ ಕೇವಲ 150 ರೂ.ನಂತೆ ಖರೀದಿಸುತ್ತಿದ್ದರು. ಈ ರೀತಿಯ ಅನ್ಯಾಯ ಏಕೆಂದು ಪ್ರಶ್ನಿಸಿದರು. ಬೆಳೆಗಾರರಿಗೆ ಅನ್ಯಾಯವಾಗುತ್ತಿರುವ ಕುರಿತು ಸಂಸದ ಶ್ರೇಯಸ್ ಪಟೇಲ್, ಶಾಸಕ ಎ.ಮಂಜು ಅವರ ಗಮನಕ್ಕೆ ತಂದರೂ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಿಲ್ಲವೆಂದು ದೂರಿದರು.

# ಎಲ್‌ಪಿಜಿ ಸಿಲಿಂಡರ್ ಕೊರತೆ: ಜಿಲ್ಲೆಯಲ್ಲಿ ಹೆಚ್ಚಿದ ಆತಂಕ


## ಸೌದೆ ಒಲೆ ಮೊರೆ ಹೋದ ವಸತಿ ನಿಲಯಗಳು | ಚನ್ನಕೇಶವ ದೇವಾಲಯದಲ್ಲಿ ದಾಸೋಹ ಸ್ಥಗಿತ

• ಪ್ರಜೋದಯ ವರದಿ

**ಹಾಸನ:** ಎಲ್‌ಪಿಜಿ ಸಿಲಿಂಡರ್ ಲಭ್ಯವಾಗದೆ ಸಾರ್ವಜನಿಕರು ಪರದಾಡುತ್ತಿದ್ದು, ಸಿಲಿಂಡರ್ ಬುಕ್ ಆಗದೆ ಮತ್ತೆ ಕೆಲವೆಡೆ ಬುಕ್ ಆಗಿದ್ದರೂ ಸಕಾಲಕ್ಕೆ ತಲುಪದೆ ತೊಂದರೆ ಎದುರಾಗಿದೆ.

ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ನಗರದ ಕೆಲವು ಹೋಟೆಲ್ ಅದರಲ್ಲೂ ಮಾಂಸಾಹಾರಿ ಹೋಟೆಲ್ ಬಂದ್ ಆಗುವ ಪರಿಸ್ಥಿತಿ ನಿರ್ಮಾಣವಾಗಿದೆ. ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಇರದ ಕಾರಣ ನಮ್ಮ ಹೋಟೆಲ್‌ನ್ನು ತೆರೆದಿರುವುದಿಲ್ಲವೆಂದು ಬಾಗಿಲಿಗೆ ಚೀಟಿ ಅಂಟಿಸಲಾಗಿದೆ. ದೊಡ್ಡ ದೊಡ್ಡ ಹೋಟೆಲ್‌ಗಳ ಸ್ಥಿತಿಯೂ ಇದೇ ಆಗಿದೆ. ಅವಕಾಶ ಇರುವವರು ಸೌದೆ ಒಲೆ ಮೊರೆ ಹೋಗಿದ್ದಾರೆ. ಪರ್ಯಾಯ ಅವಕಾಶ ಇಲ್ಲದವರು ಬಾಗಿಲು ಮುಚ್ಚಿದ್ದಾರೆ.

ಉಳಿದಂತೆ ಕೆಲ ಹೋಟೆಲ್ ಮಾಲೀಕರು ಹಾಗು ಫುಡ್ ಕೋರ್ಟ್‌ನವರು ಒಂದು ದಿನ ವ್ಯಾಪಾರ ಬಂದ್ ಆದರೂ ಸಮಸ್ಯೆ ಆಗಲಿದೆ ಎಂದು ದುಬಾರಿ ಹಣ ನೀಡಿ ವಾಣಿಜ್ಯ ಸಿಲಿಂಡರ್ ಖರೀದಿಸಿ ವ್ಯಾಪಾರ ಮುಂದುವರಿಸಿದ್ದಾರೆ.



### ಬೇಲೂರಿನಲ್ಲಿ ದಾಸೋಹ ಬಂದ್

ಬೇಲೂರಿನ ಚನ್ನಕೇಶವಸ್ವಾಮಿ ದೇವಾಲಯದ ದಾಸೋಹಕ್ಕೂ ಸಿಲಿಂಡರ್ ಕೊರತೆ ಬಿಸಿ ತಟ್ಟಿದೆ. ಶುಕ್ರವಾರ ದಾಸೋಹ ವ್ಯವಸ್ಥೆ ಇಲ್ಲದ್ದರಿಂದ ಭಕ್ತರು ಪ್ರಸಾದ ಸೇವಿಸದೆ ವಾಪಾಸ್ಸಾದರು. ಬೇಲೂರು ದೇವಸ್ಥಾನಕ್ಕೆ ನಿತ್ಯ ನೂರಾರು ಜನರು ಬರುತ್ತಾರೆ. ವಾರಾಂತ್ಯದಲ್ಲಿ ಎರಡು ಸಾವಿರ ಜನರು ಪ್ರಸಾದ ಸೇವಿಸುತ್ತಾರೆ. ವಾರದ ದಿನಗಳಲ್ಲಿ 300 ರಿಂದ 400 ಜನರು ಪ್ರಸಾದ ಸ್ವೀಕರಿಸುತ್ತಾರೆ.

ಕೊರೊನಾ ಸಮಯದಲ್ಲೂ ದಾಸೋಹದ ವ್ಯವಸ್ಥೆ ಇತ್ತು. ಆದರೆ, ಈಗ ಸಿಲಿಂಡರ್ ಅಭಾವದಿಂದ ಸಮಸ್ಯೆ ತಲೆದೋರಿದೆ. ಇಲ್ಲಿ ಗೀಸರ್ ಸಹ ಇದೇ ಸಮಯಕ್ಕೆ ಹಾಳಾಗಿದೆ. ಆದ್ದರಿಂದ ಅದನ್ನು ಕೂಡಲೆ ಸರಿಪಡಿಸಬೇಕೆಂದು ಭಕ್ತರು ಒತ್ತಾಯಿಸಿದ್ದಾರೆ.

ದೇವಾಲಯ ಆಡಳಿತಾಧಿಕಾರಿ ಯೋಗೇಶ್ ಅವರು ಮಾತನಾಡಿ, ನಮಗೆ ಪ್ರತಿನಿತ್ಯ ವಾಣಿಜ್ಯ ಸಿಲಿಂಡರ್ ಅವಶ್ಯಕತೆ ಇದೆ. ಎರಡು ದಿನಗಳಿಂದ ಸಿಲಿಂಡರ್ ಅಭಾವದಿಂದ ಭಕ್ತರಿಗೆ ದಾಸೋಹ ವ್ಯವಸ್ಥೆ ನಿಲ್ಲಿಸಲಾಗಿದೆ. ಇದರ ಜೊತೆ ಬಾಯ್ಲರ್ ಸಹ ಕೆಟ್ಟಿದ್ದು, ಪ್ರವಾಸಿಗರಿಗೆ ತೊಂದರೆಯಾಗಿದೆ.ಸದ್ಯಕ್ಕೆ ಸೌದೆ ಒಲೆ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮಾಡಲಾಗಿದೆ. ಶನಿವಾರದಿಂದ ಸೌದೆ ಒಲೆಯಲ್ಲಿ ಅಡುಗೆ ಮಾಡಲು ನಿರ್ಧರಿ ಸಲಾಗಿದೆ. ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಸಮಸ್ಯೆ ಇತ್ಯರ್ಥ ಪಡಿಸಲಾಗುವುದೆಂದರು.

### ಹಾಸ್ಟೆಲ್ ಮಕ್ಕಳಿಗೂ ಸಮಸ್ಯೆ

ಸಿಲಿಂಡರ್ ಸಮಸ್ಯೆಯಿಂದಾಗಿ ಹಾಸನದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಅಡುಗೆಗಾಗಿ ಸೌದೆ ಒಲೆ ಮೊರೆ ಹೋಗಲಾಗಿದೆ. ಬೆಳಿಗ್ಗೆ ಉಪಾಹಾರ ಮಾಡುತ್ತಿದ್ದಾಗಲೇ ಸಿಲಿಂಡರ್ ಖಾಲಿಯಾದವು. ಮಕ್ಕಳಿಗೆ ತೊಂದರೆಯಾಗಬಾರದೆಂದು ಸೌದೆ ಖರೀದಿಸಿ ಅಡುಗೆ ಮಾಡಿದ್ದೇವೆಂದು ಸಿಬ್ಬಂದಿ ಹೇಳಿದರು. ಎರಡು ದಿನಗಳ ಮೊದಲೇ ಬುಕ್ ಮಾಡಿದ್ದರೂ ಇನ್ನೂ ತಲುಪಿಲ್ಲ. ಮೇಲಾಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಅವರು ಒತ್ತಾಯಿಸಿದರು.

ವಸತಿ ನಿಲಯದಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿರುವುದರಿಂದ ಸಿಲಿಂಡರ್ ಸಮಸ್ಯೆ ಮಕ್ಕಳ ವ್ಯಾಸಂಗದ ಮೇಲೆ ಅಡ್ಡಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಸಿಲಿಂಡರ್ ಅಭಾವ ಎಲ್ಲೆಡೆ ಹೆಚ್ಚಿರುವುದರಿಂದ ಸೌದೆಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆಯೂ ಇದೆ.

ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ದೂದ್‌ಪೀರ್ ಅವರು ಮಾತನಾಡಿ, ಜಿಲ್ಲೆಯ ಯಾವ ವಸತಿ ನಿಲಯಗಳಲ್ಲೂ ಸಿಲಿಂಡರ್‌ಗೆ ಸಮಸ್ಯೆ ಇಲ್ಲ. ಹಾಗೇನಾದರೂ ಇದ್ದರೆ ನನ್ನ ಗಮನಕ್ಕೆ ತರಬೇಕು. ಅಗತ್ಯಕ್ಕಿಂತ ಹೆಚ್ಚು ಸಿಲಿಂಡರ್‌ಗಳು ದಾಸ್ತಾನಿವೆ. ಯಾವುದಾದರೂ ವಸತಿ ನಿಲಯಗಳಲ್ಲಿ ಸಮಸ್ಯೆ ಇದ್ದರೆ ತಕ್ಷಣ ಪರಿಹಾರ ಕ್ರಮ ಕೈಗೊಳ್ಳಲಾಗುವುದೆಂದರು.

### ವದಂತಿ ಹಬ್ಬಿಸುವವರ ವಿರುದ್ಧ ಕ್ರಮದ ಎಚ್ಚರಿಕೆ

ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗೆ ಸಮಸ್ಯೆ ಇಲ್ಲವಾದರೂ ವದಂತಿಯಿಂದ ಜನರು ಕಂಗೆಡುತ್ತಿದ್ದಾರೆ. ಭೀತಿಯಿಂದ ಏಜೆನ್ಸಿಗಳ ಮುಂದೆ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದಾರೆ. ಸಿಲಿಂಡರ್ ಸಿಗುತ್ತಿಲ್ಲವೆಂದು ವದಂತಿ ಹರಡಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗುತ್ತದೆಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಅರುಣ್‌ಕುಮಾರ್ ಸಂಗಾವಿ ಅವರು ಎಚ್ಚರಿಕೆ ನೀಡಿದರು.

ಸಿಲಿಂಡರ್ ಖರೀದಿಸಿದ 25 ದಿನಗಳವರೆಗೆ ಬುಕ್ಕಿಂಗ್ ಆಗುವುದಿಲ್ಲ. ಆದರೆ, ಕೆಲವರು ಮನೆಯಲ್ಲಿ ಸಿಲಿಂಡರ್ ಇದ್ದರೂ ಭೀತಿಯಿಂದ ಬುಕ್ಕಿಂಗ್‌ಗೆ ಮುಗಿಬೀಳುತ್ತಿದ್ದಾರೆ. ಜಿಲ್ಲೆಯಲ್ಲಿ 34 ಗ್ಯಾಸ್ ಏಜೆನ್ಸಿಗಳಿದ್ದು, ಸಿಲಿಂಡರ್‌ಗಳು ಸಮರ್ಪಕವಾಗಿ ಬರುತ್ತಿವೆ. ಅದೇ ರೀತಿ ವಿತರಣೆಯೂ ಆಗುತ್ತಿದೆ. ಯುದ್ಧದ ನೆಪದಲ್ಲಿ ಕೆಲವರು ಜನರಲ್ಲಿ ಭಯ ಹುಟ್ಟಿಸುತ್ತಿದ್ದಾರೆಂದರು.

## ಅಬಕಾರಿ ಸುಂಕದಿಂದ ಹೊಗೆಸೊಪ್ಪು ಬೆಳೆಗಾರರಿಗೆ ನಷ್ಟ: ಕೇಂದ್ರ ಸಚಿವರಿಗೆ ಮನವರಿಕೆ

• ಪ್ರಜೋದಯ ವರದಿ

**ಹಾಸನ:** ಹೊಗೆಸೊಪ್ಪು ಪದಾರ್ಥಕ್ಕೆ ಅಬಕಾರಿ ಸುಂಕ ವಿಧಿಸುತ್ತಿರುವ ಪರಿಣಾಮ ಬೆಲೆಯಲ್ಲಿ ಭಾರೀ ಕುಸಿತವಾಗಿ ಬೆಳೆಗಾರರು ಸಮಸ್ಯೆಗೆ ಸಿಲುಕಿದ್ದು, ಸರ್ಕಾರ ಮಧ್ಯ ಪ್ರವೇಶಿಸಿ ಪರಿಹಾರ ಕ್ರಮ ಜರುಗಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಶುಕ್ರವಾರ ನವದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿಯಾದ ಅವರು ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿದರು. ಕರ್ನಾಟಕದಲ್ಲಿ ತಂಬಾಕು ಹರಾಜು ಪ್ರಕ್ರಿಯೆ ಆರಂಭವಾಗಿದೆಯಾದರೂ ಬೆಳೆಗಾರರಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. 2025ರ ಡಿ.31 ರಂದು ಕೇಂದ್ರ ಸರ್ಕಾರ ಸಂಸ್ಕರಿಸದ



ತಂಬಾಕಿನ ಮೇಲೆ ಶೇ.40 ರಷ್ಟು ಜಿಎಸ್‌ಟಿ ವಿಧಿಸಿರುವುದು ತೊಂದರೆಗೆ ಕಾರಣವಾಯಿತು. ಈ ಪ್ರಕ್ರಿಯೆ ವ್ಯಾಪಕ ವಿರೋಧ ವ್ಯಕ್ತವಾದ ಬಳಿಕ ಜಿಎಸ್ ಟಿಯನ್ನು ವಾಪಾಸ್ ಪಡೆಯಿತಾದರೂ ತಂಬಾಕು ಉತ್ಪನ್ನಗಳ ಮೇಲಿನ ಹೆಚ್ಚಿದ ಅಬಕಾರಿ ತೆರಿಗೆ ಮುಂದುವರಿದಿರುವುದರಿಂದ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ ಎಂದರು.

ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ತೆರಿಗೆ ಹೆಚ್ಚಿಸಿರುವುದರಿಂದ ಮಾರಾಟದಲ್ಲಿ ಕುಸಿತವಾಗಿದೆ. ಹೀಗಾಗಿ ತಂಬಾಕು ಹರಾಜು ಪ್ರಕ್ರಿಯೆಯಲ್ಲಿ ಭಾರೀ ವ್ಯತ್ಯಾಸವಾಗಿದೆ. ಮೊದಲಿನ ಬೆಲೆಗೆ ಹೋಲಿಸಿದರೆ ಸದ್ಯ ಬ್ರೈಟ್ ಗ್ರೇಡ್ ತಂಬಾಕಿನ ಬೆಲೆ ಪ್ರತಿ ಕೆ.ಜಿ.ಗೆ 45-50 ರಷ್ಟು ಇಳಿಕೆಯಾಗಿದೆ. ಮುಖ್ಯ ಉತ್ಪಾದಕ ಹಾಗು ರಫ್ತುದಾರ ಸಂಸ್ಥೆಯಾದ ಐಟಿಸಿ ಲಿಮಿಟೆಡ್, ಹರಾಜುಗಳಲ್ಲಿ ನೋಂದಾಯಿತ ಖರೀದಿದಾರರಾಗಿದ್ದು, ಮೊದಲಿನಿಂದ ನಿತ್ಯ ಶೇ.45 ರಿಂದ 50ರ ವರೆಗೆ ಖರೀದಿ ಮಾಡುತ್ತಿತ್ತು. ಆದರೆ, ಮಾರುಕಟ್ಟೆ ಅಸ್ಥಿರತೆಯಿಂದ ಶೇ.50 ರಷ್ಟು ಕಡಿಮೆಯಾಗಿದೆ. ಪ್ರಸ್ತುತ ಹರಾಜಿನ ಒಟ್ಟು ಪ್ರಮಾಣದಲ್ಲಿ ಅದರ ಖರೀದಿ ಪಾಲು ಸುಮಾರು ಶೇ.23 ಮಾತ್ರವಾಗಿದೆ. ಪ್ರಮುಖ ಖರೀದಿದಾರನ ಭಾಗವಹಿಸುವಿಕೆ ಕಡಿಮೆಯಾದ ಕಾರಣ ಬೆಲೆ ನಿರ್ಧಾರ ಪ್ರಕ್ರಿಯೆ ಹಾಗು ಮಾರುಕಟ್ಟೆಯ ಒಟ್ಟಾರೆ ಸ್ಥಿರತೆ ಮೇಲೆ ಪರಿಣಾಮ ಬೀರಿದೆ ಎಂದು ಸಂಸದ ಶ್ರೇಯಸ್ ಸಚಿವರ ಗಮನಕ್ಕೆ ತಂದಿದ್ದಾರೆ.

ಅಬಕಾರಿ ಸುಂಕ ಹೆಚ್ಚಿಸಿರುವ ಹಿನ್ನಲೆಯಲ್ಲಿ ಮಾರುಕಟ್ಟೆಯಲ್ಲಿ ನಿರ್ಬಂಧಿತ ಪರಿಸ್ಥಿತಿ ಉಂಟಾಗಿದೆ. ಅದರಿಂದ ಹರಾಜುಗಳಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್ ಕಡಿಮೆಯಾಗಿದ್ದು, ರೈತರಿಗೆ ದೊರೆಯುವ ಬೆಲೆಯೂ ಇಳಿಕೆಯಾಗಿದೆ. ಕೇಂದ್ರ ಸರ್ಕಾರ ಕೂಡಲೇ ಅಬಕಾರಿ ಸುಂಕ ಕಡಿಮೆ ಮಾಡಬೇಕು. ತಂಬಾಕು ಮಂಡಳಿ ಹಾಗು ಬೆಳೆಗಾರರೊಂದಿಗೆ ಸಭೆ ನಡೆಸಿ ಸೂಕ್ತ ತಿದ್ದುಪಡಿ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

## ಒಂದು ವಾರ ಸಿಲಿಂಡರ್ ಸಮಸ್ಯೆ: ಸಚಿವ ಮುನಿಯಪ್ಪ

• ಪ್ರಜೋದಯ ವರದಿ

**ಬೆಂಗಳೂರು:** ಅನಿರೀಕ್ಷಿತ ಯುದ್ಧದಿಂದ ಪರಿಸ್ಥಿತಿ ಬಿಗಡಾಯಿಸಿದ್ದು, ಒಂದು ವಾರ ಹೋಟೆಲ್‌ಗಳಿಗೆ ವಾಣಿಜ್ಯ ಸಿಲಿಂಡರ್‌ಗಳನ್ನು ಪೂರೈಸುವುದು ಸಾಧ್ಯವಿಲ್ಲವೆಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಅವರು ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಸದಸ್ಯ ಎಂ. ನಾಗರಾಜು, ಇವಾನ್ ಡಿಸೋಜಾ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಸಿಲಿಂಡರ್ ಕೊರತೆ ಯಿಂದಾಗಿ ಹೋಟೆಲ್‌ಗಳು ಸಂಕಷ್ಟ ಎದುರಿಸುತ್ತಿವೆ. ಪಿಜಿ, ದೇವಾಲಯಗಳಲ್ಲಿ ಪ್ರಸಾದ ವಿತರಣೆ ಮತ್ತು ಆಟೋಗಳ ಕಾರ್ಯಾಚರಣೆಗೆ ಅಡ್ಡಿಯಾಗಿದೆ ಎಂದರು.

## ಅಂಗನವಾಡಿ ಕೇಂದ್ರಕ್ಕೆ ಬೆಂಕಿ: ಕಿಡಿಗೇಡಿಗಳ ಕೃತ್ಯ

• ಪ್ರಜೋದಯ ವರದಿ

**ಹಾಸನ:** ಅಂಗನವಾಡಿ ಕೇಂದ್ರಕ್ಕೆ ಕಿಡಿಗೇಡಿಗಳು ಬೆಂಕಿ ಇಟ್ಟ ಪರಿಣಾಮ ಮಕ್ಕಳ ಆಟೋಪಕರಣ, ಪುಸ್ತಕ, ಆಹಾರ ಪದಾರ್ಥ, ಹಾಲಿನ ಪೌಡರ್ ಸೇರಿ ಅನೇಕ ವಸ್ತುಗಳು ಸುಟ್ಟಿರುವ ಘಟನೆ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ಹೊಂಗೆರೆ ಗ್ರಾಮದಲ್ಲಿ ನಡೆದೆ.

ಅಂಗನವಾಡಿ ಕಟ್ಟಡ ಶಿಥಿಲವಾಗಿದ್ದು, ಕಿಟಕಿ-ಬಾಗಿಲು ಹಳೆಯದಾಗಿದ್ದವು. ಇದರಿಂದ ಬೀಗ ಹಾಕಲು ಆಗುತ್ತಿರಲಿಲ್ಲ. ಪರಿಣಾಮ ಕಿಡಿಗೇಡಿಗಳು ಹೊತ್ತಿಸಿದ ಬೆಂಕಿ ಕೊಠಡಿಯೊಳಗೆ ವ್ಯಾಪಿಸಿ ಈ ಅನಾಹುತ ಸಂಭವಿಸಿದೆ. ಅದೃಷ್ಟವಶಾತ್ ಅಂಗನವಾಡಿ ಸಮಯ ಮುಗಿದಿದ್ದರಿಂದ ಯಾವುದೇ ಮಕ್ಕಳು ಕೇಂದ್ರದಲ್ಲಿ



ಇರದ ಕಾರಣ ಅನಾಹುತವೊಂದು ತಪ್ಪಿದಂತಾಗಿದೆ. ಇಲ್ಲಿ ಕಲಿಯುತ್ತಿರುವ ಒಟ್ಟು 18 ಮಕ್ಕಳು ಮನೆಗೆ ತೆರಳಿದ್ದರಿಂದ ಅನಾಹುತ ಸಂಭವಿಸಿಲ್ಲ.

ಈ ನಡುವೆ ಬೆಂಕಿ ಅನಾಹುತದಿಂದ ಸುಟ್ಟು ಹೋಗಿರುವ ಅಂಗನವಾಡಿ ಕೇಂದ್ರದ ಒಳಗೆ ಮದ್ಯದ ಬಾಟಲಿ ಪತ್ತೆಯಾಗಿರುವುದು ಅನುಮಾನಗಳಿಗೆ ಎಡೆ ಮಾಡಿದೆ. ಅಂಗನವಾಡಿ ಕೇಂದ್ರದಲ್ಲಿ ಬೆಂಕಿ ಕಾಣಿಸಿಕೊಂಡು ಹೊಗೆ ಏಳುತ್ತಿರುವುದನ್ನು ಗಮನಿಸಿದ ಸ್ಥಳೀಯರು ದೌಡಾಯಿಸಿ ನೀರು ಹಾಕಿ ಬೆಂಕಿಯನ್ನು ನಂದಿಸಿದರು. ಅಂಗನವಾಡಿ ಶಿಕ್ಷಕಿ ನಿಮಿತಾ ಅವರು ನೀಡಿದ ದೂರು ಆಧರಿಸಿ ಶಾಂತಿಗ್ರಾಮ ಠಾಣೆ ಪಿಎಸ್‌ಐ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪರಿಶೀಲನೆ ನಡೆಸಿದರು. ಈ ವೇಳೆ ಅಂಗನವಾಡಿ ಕೇಂದ್ರವನ್ನು ಹೊಸದಾಗಿ ನಿರ್ಮಿಸಿಕೊಡುವಂತೆ ಸ್ಥಳೀಯರು ಹಾಗು ಮಕ್ಕಳ ಪೋಷಕರು ಮನವಿ ಮಾಡಿದ್ದಾರೆ.

## ಹಾಸನ ಹಾಲು ಒಕ್ಕೂಟ ವಿಶೇಷ ಸಾಮಾನ್ಯ ಸಭೆಯಲ್ಲಿ ಹೆಚ್.ಡಿ.ರೇವಣ್ಣ ಭರವಸೆ

# ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದರೆ ಹಾಲಿನ ಸಹಾಯ ಧನ ಹೆಚ್ಚಳ

• ಪ್ರಜೋದಯ ವರದಿ

**ಹಾಸನ:** ಹಾಲು ಉತ್ಪಾದಕರಿಗೆ ನೀಡುತ್ತಿರುವ ಸಹಾಯಧನವನ್ನು ರಾಜ್ಯ ಸರ್ಕಾರ 7ರೂ. ನಿಂದ ಕನಿಷ್ಠ 10 ಅಥವಾ 12ರೂ.ಗೆ ಏರಿಕೆ ಮಾಡಬೇಕೆಂದು ಹಾಸನ ಹಾಲು ಒಕ್ಕೂಟ ಅಧ್ಯಕ್ಷರೂ ಆದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಒತ್ತಾಯಿಸಿದರು.

ಶುಕ್ರವಾರ ನಗರದ ಡೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವಿಶೇಷ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು,




ರೈತರಿಗೆ ಈಗ ನೀಡುತ್ತಿರುವ ಸಹಾಯ ಧನ ಸಾಕಾಗುತ್ತಿಲ್ಲ, ಹೀಗಾಗಿ ಹೆಚ್ಚು ಮಾಡಬೇಕು. ಈಗಿನ ಸರ್ಕಾರ ಮಾಡದಿದ್ದರೆ 2028ಕ್ಕೆ ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನಾವೇ ಮಾಡುತ್ತೇವೆಂದು ಹೇಳಿದರು.

ನಮ್ಮ ಒಕ್ಕೂಟದಲ್ಲಿ 2025-26 ನೇ ಸಾಲಿನಲ್ಲಿ ಗರಿಷ್ಟ 15.12 ಲಕ್ಷ ಲೀ. ಹಾಲು ಸಂಗ್ರಹಿಸಿದ್ದು, ಒಕ್ಕೂಟದ ನಿರೀಕ್ಷೆಯಂತೆ ಹಾಲು ಸಂಗ್ರಹಣೆ ಪ್ರಗತಿಯನ್ನು ಕಾಯ್ದುಕೊಳ್ಳಲಾಗಿದೆ. ಪ್ರಸ್ತುತ 1,734 ಸಂಘಗಳಿಂದ ದಿನವಹಿ ಸರಾಸರಿ 13.90 ಲಕ್ಷ ಲೀಟರ್‌ಗಳಷ್ಟು ಹಾಲು ಸಂಗ್ರಹಿಸಲಾಗುತ್ತಿದೆ. 2025-26ನೇ ಸಾಲಿಗೆ 2725.00 ಕೋ.ರೂ. ವಹಿವಾಟು ನಡೆಸುವ ಗುರಿ ಹೊಂದಲಾಗಿದ್ದು, 5.50 ಕೋ. ರೂ.ನಷ್ಟು ನಿವ್ವಳ ಆದಾಯ ನಿರೀಕ್ಷಿಸಲಾಗಿದೆ ಎಂದರು.

ಒಕ್ಕೂಟ ಮತ್ತು ಉತ್ಪಾದಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಖರೀದಿ ದರವನ್ನು ಪರಿಷ್ಕರಣೆ ಮಾಡಲಾಗುತ್ತಿದ್ದು, ಪ್ರಸ್ತುತದಲ್ಲಿ 36.17 ರೂ.ನಂತೆ ಸಂಘಗಳಿಗೆ ಹಾಗು 34.50 ರೂ.ನಂತೆ ಉತ್ಪಾದಕರಿಗೆ ಖರೀದಿ ದರ ನೀಡಲಾಗುತ್ತಿದೆ. ಒಕ್ಕೂಟದ ವ್ಯಾಪ್ತಿಯಲ್ಲಿ 1,665 ಸಂಘಗಳಲ್ಲಿ ಎಎಂಸಿಯು ಘಟಕಗಳು ಹಾಗು ಒಟ್ಟು 358 ಬಿಎಂಸಿ ಘಟಕಗಳು ಕಾರ್ಯನಿರ್ವಹಿಸುತ್ತಿವೆ. 2025-26 ನೇ ಸಾಲಿನಲ್ಲಿ ಹೊಸದಾಗಿ 75 ಸಂಘಗಳಿಗೆ ಎಎಂಸಿಯು ಘಟಕಗಳನ್ನು ಸ್ಥಾಪಿಸಲು ಯೋಜಿಸಿದ್ದು, ಪ್ರತಿ ಘಟಕಕ್ಕೆ 1 ಲಕ್ಷದಂತೆ 75 ಲಕ್ಷ ರೂ. ಸಹಾಯಧನ ನೀಡಲಾಗುವುದೆಂದರು.

ಒಕ್ಕೂಟದಿಂದ ನಿರ್ವಹಣೆ ಮಾಡುತ್ತಿರುವ ತೆಲಂಗಾಣ ರಾಜ್ಯದ ಹೈದರಾಬಾದ್ ನಗರ ಮತ್ತು ಇನ್ನಿತರೆ ನಗರಗಳಲ್ಲಿ ಹಾಸನ ಹಾಲು ಒಕ್ಕೂಟದ ವತಿಯಿಂದ ಪ್ರಸ್ತುತದಲ್ಲಿ ದಿನವಹಿ 2.30 ಲಕ್ಷ ಲೀ. ಹಾಲು ಮತ್ತು ಮೊಸರು ಮಾರಾಟ ಮಾಡಲಾಗುತ್ತಿದೆ. 2025-26 ನೇ ಸಾಲಿನಲ್ಲಿ ದಿನಕ್ಕೆ 2.50 ರಿಂದ 3.0 ಲಕ್ಷ ಲೀಟರ್ ಹಾಲು ಮತ್ತು ಮೊಸರು ಮಾರಾಟ ಮಾಡಲು ಮಾರುಕಟ್ಟೆ ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

» ನಾಲ್ಕನೇ ಪುಟದಲ್ಲಿ

## ಕಾರು-ಬಸ್ ಮುಖಾಮುಖಿ : ಮೂವರ ಸಾವು

• ಪ್ರಜೋದಯ ವರದಿ

**ಸಕಲೇಶಪುರ:** ಕೆಎಸ್‌ಆರ್‌ಟಿಸಿ ಬಸ್ ಹಾಗು ಕಾರು ನಡುವಿನ ಭೀಕರ ಅಪಘಾತದಲ್ಲಿ ಮೂವರು ಸ್ಥಳದಲ್ಲಿ ಸಾವನ್ನಪ್ಪಿರುವ ಘಟನೆ ಶಿರಾಡಿಘಾಟ್ ರಸ್ತೆಯ ಗುಂಡ್ಯ ಸಮೀಪ ಶುಕ್ರವಾರ ನಡೆದಿದೆ.

ಉಜಿರೆ ನಿವಾಸಿಗಳಾದ ಶ್ರೀಧರ ಮರಕಡ, ಜನಾರ್ಧನ ಕೆರಿಮಾರ್ ಹಾಗು ಕೊಕ್ಕಡ ನಿವಾಸಿ ಚಂದ್ರಶೇಖರಗೌಡ ಮೃತ ದುರ್ದೈವಿಗಳು. ಕಾರಿನಲ್ಲಿದ್ದ ಮತ್ತೊಬ್ಬ ವ್ಯಕ್ತಿ ಸುರೇಶ್ ಎಂಬುವವರ ಸ್ಥಿತಿ ಗಂಭೀರವಾಗಿದೆ.

ನಾಲ್ವರು ಒಂದೇ ಕಾರಿನಲ್ಲಿ ಸಕಲೇಶಪುರದಲ್ಲಿ ಮದುವೆ ಮುಗಿಸಿಕೊಂಡು ವಾಪಾಸ್ ಉಜಿರೆ ಕಡೆ ಹೋಗುತ್ತಿದ್ದಾಗ ಎದುರಿನಿಂದ ಬಂದ ಬಸ್ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ




ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡಿದ್ದ ಸುರೇಶ್ ಅವರನ್ನು ಮಂಗಳೂರು ಆಸ್ಪತ್ರೆಗೆ ಸಾಗಿಸಲಾಯಿತು. ಡಿಕ್ಕಿಯಾದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಪೊಲೀಸರ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಪಘಾತದಿಂದ ಕೆಲ ಸಮಯ ಟ್ರಾಫಿಕ್ ಜಾಮ್ ಉಂಟಾಗಿತ್ತು. ಪೊಲೀಸರು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಸರಳ ಪ್ರಕ್ರಿಯೆ
# ಸುಲಭ ಸೇವೆ

## ಅಲೆದಾಟ,
## ಕಾಲ ವಿಳಂಬವಿಲ್ಲದೆ
## ಜನರ ಮನೆ ಬಾಗಿಲಿಗೆ
## ಆಡಳಿತ ಸೇವೆಗಳು





- ಕಂದಾಯ ಗ್ರಾಮ ಯೋಜನೆಯಡಿ ದಾಖಲೆರಹಿತ ಜನವಸತಿಗಳಿಗೆ **1,11,111 ಹಕ್ಕುಪತ್ರಗಳ ವಿತರಣೆ**
- "ಪೋಡಿಮುಕ್ತ ಗ್ರಾಮ" ಅಭಿಯಾನದಡಿ 3,126 ಗ್ರಾಮಗಳ **91,200 ಅರ್ಜಿಗಳ ವಿಲೇವಾರಿ** ಮತ್ತು ಏಕವ್ಯಕ್ತಿ ಪಹಣಿಗಳ ಸೃಜನೆ
- ರಾಜ್ಯದ **30,662 ಗ್ರಾಮ ನಕಾಶೆ** ಮತ್ತು ಹಿಸ್ಸಾ ದಾಖಲೆಗಳಿಗೆ ಡಿಜಿಟೈಸ್ ಹಾಗೂ ಜಿಯೊ ರೆಫರೆನ್ಸ್ ವ್ಯವಸ್ಥೆ
- ಮೋಜಿಣಿ ತಂತ್ರಾಂಶದ ಮೂಲಕ **10.89 ಲಕ್ಷ ಜಮೀನುಗಳ** ಅಳತೆ ಕಾರ್ಯ ಪೂರ್ಣ

**ಕರ್ನಾಟಕ ನವ ನಿರ್ಮಾಣಕ್ಕೆ**
## ಗ್ಯಾರಂಟಿ ಸರ್ಕಾರ...

**ನಮ್ಮ ಸರ್ಕಾರವು ತಂತ್ರಜ್ಞಾನದ ಗರಿಷ್ಠ ಬಳಕೆಗೆ ಒತ್ತು ನೀಡಿ ಕಂದಾಯ ಆಡಳಿತವನ್ನು ಜನಸ್ನೇಹಿ ಹಾಗೂ ಪಾರದರ್ಶಕವಾಗಿಸುವಲ್ಲಿ ಯಶಸ್ಸು ಕಂಡಿದೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಡಿಸಿಎಂ ಡಿ.ಕೆ.ಶಿ.ಗೆ ಒಡಿಶಾ ಶಾಸಕರ ಕಾಯುವ ಹೊಣೆ

## ರಾಜ್ಯಸಭೆ ಚುನಾವಣೆಯಲ್ಲಿ ಆಪರೇಷನ್ ಕಮಲ ಭೀತಿ | ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯಸಭೆ ಚುನಾವಣೆ ಹಿನ್ನಲೆಯಲ್ಲಿ ಒಡಿಶಾದ ಕಾಂಗ್ರೆಸ್‌ಗೆ ಅಡ್ಡ ಮತದಾನ ಹಾಗು ಆಪರೇಷನ್ ಕಮಲ ಭೀತಿ ಎದುರಾಗಿದೆ. ಹೀಗಾಗಿ, ಮೊದಲ ಸಲ ಗೆದ್ದಿರುವ 8 ಶಾಸಕರನ್ನು ಗುರುವಾರ ರಾತ್ರಿ ಕರ್ನಾಟಕಕ್ಕೆ ಕಳಿಸಿದ್ದು, ಅವರ ಹೊಣೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಹಿಸಿದೆ.

ಒಡಿಶಾದ ಭುವನೇಶ್ವರದಿಂದ ಹೊರಟು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಾತ್ರಿ 11 ಗಂಟೆಗೆ ಬಂದಿಳಿದ ಶಾಸಕರನ್ನು, ಶಿವಕುಮಾರ್ ಆಪ್ತರು ಬರ ಮಾಡಿಕೊಂಡರು. ನಿಲ್ದಾಣದಿಂದ ಪೊಲೀಸ್ ಎಸ್ಕಾರ್ಟ್ ವ್ಯವಸ್ಥೆಯೊಂದಿಗೆ ಶಾಸಕರನ್ನು ಬಿಡದಿ ಬಳಿಯ ವಂಡರ್ ಲಾ ರೆಸಾರ್ಟ್‌ಗೆ ಕರೆತರಲಾಯಿತು.

ಒಡಿಶಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಭಕ್ತ ಚರಣ್ ದಾಸ್ ಅವರೊಂದಿಗೆ ಶಾಸಕರಾದ ರಾಜನ್ ಎಕ್ಕ, ಅಶೋಕ್ ದಾಸ್, ಸತ್ಯಜಿತ್ ಗೊಮಂಗೊ, ಅಪ್ಪಲ ಕುಮಾರಸ್ವಾಮಿ, ಮಂಗು ಕಿಲ್ಲೋ, ಪವಿತ್ರ ಸೌಂತಾ, ನೀಲಮಾಧವ್ ಹಿಕ್ಕ ಹಾಗು ಪ್ರಫುಲ್ಲ ಪ್ರಧಾನ್ ರೆಸಾರ್ಟ್‌ಗೆ ಬಂದು ತಂಗಿದ್ದಾರೆ. ರೆಸಾರ್ಟ್ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಸಂಜೆ ಡಿ.ಕೆ.ಶಿವಕುಮಾರ್ ಅವರು ರೆಸಾರ್ಟ್‌ಗೆ ಬಂದು ಶಾಸಕರನ್ನು ಭೇಟಿ ಮಾಡಿದರು. ಕೆಲ ನಿಮಿಷ ಶಾಸಕರ ಜೊತೆ ಸಭೆ ನಡೆಸಿದ ಅವರು, ಶಾಸಕರೊಂದಿಗೆ ಹೊರಗಡೆ ಬಂದು ಫೋಟೊ ತೆಗೆಸಿಕೊಂಡರು. ಸ್ಥಳೀಯ ಮಾಗಡಿ ಶಾಸಕ ಹೆಚ್.ಸಿ.ಬಾಲಕೃಷ್ಣ ಹಾಗು ಚನ್ನಪಟ್ಟಣ ಶಾಸಕ ಸಿ.ಪಿ.ಯೋಗೇಶ್ವರ್ ಜೊತೆಗಿದ್ದರು.



**ಗೆಲುವಿಗೆ ಬೇಕು 30 ಮತ:** ಒಡಿಶಾ ವಿಧಾನ ಸಭೆಯು 147 ಶಾಸಕರ ಬಲವನ್ನು ಹೊಂದಿದೆ. ಈ ಪೈಕಿ, ರಾಜ್ಯಸಭೆಯ 4 ಸ್ಥಾನಗಳಿಗೆ 5 ಮಂದಿ ಸ್ಪರ್ಧಿಸಿದ್ದಾರೆ. ಅದರಲ್ಲಿ ಬಿಜೆಪಿಯ 3, ಬಿಜೆಡಿಯ 1 ಹಾಗು ಕಾಂಗ್ರೆಸ್ ಮತ್ತು ಬಿಜು ಜನತಾ ದಳದ (ಬಿಜೆಡಿ) ಅಭ್ಯರ್ಥಿಯಾಗಿ ಒಡಿಶಾ ವೈದ್ಯಕೀಯ ವಿಶ್ವವಿದ್ಯಾಲಯದ ಮಾಜಿ ನಿರ್ದೇಶಕ ಹಾಗು ಖ್ಯಾತ ಯುರೋ ಲಾಜಿಸಿಸ್ಟ್ ಡಾ|| ದತ್ತೇಶ್ವರ್ ಹೋಟ ಸ್ಪರ್ಧಿಸಿದ್ದಾರೆ. ಗೆಲುವಿಗೆ ಪ್ರತಿ ಅಭ್ಯರ್ಥಿ 30 ಮತಗಳನ್ನು ಪಡೆಯಬೇಕು. ಸದ್ಯ ಬಿಜೆಡಿಯ 18, ಕಾಂಗ್ರೆಸ್‌ನ 14 ಹಾಗು ಸಿಪಿಐ(ಎಂ)ನ ಒಬ್ಬರು ಸೇರಿ 32 ಲಭ್ಯ ಮತಗಳಿವೆಂದು ಕಾಂಗ್ರೆಸ್‌ಮೂಲಗಳು ತಿಳಿಸಿವೆ.

**ಬಿಜೆಪಿಯಿಂದ ಕೈ ಶಾಸಕರಿಗೆ ಆಮಿಷ**

ಶಾಸಕರ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ರಾಜ್ಯಸಭೆ ಚುನಾವಣೆ ಹಿನ್ನಲೆಯಲ್ಲಿ ಬಿಜೆಪಿ ಒಡಿಶಾದಲ್ಲಿ ಆಪರೇಷನ್ ಕಮಲಕ್ಕೆ ಮುಂದಾಗಿದೆ. ನಮ್ಮ ಶಾಸಕರಿಗೆ ವಿವಿಧ ಆಮಿಷಗಳ ಜೊತೆಗೆ ಒಡ್ಡುತ್ತಾ ಒತ್ತಡ ಹೇರುತ್ತಿದೆ. ಹಾಗಾಗಿ, ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ಭಕ್ತ ಚರಣ್‌ದಾಸ್ ಅವರು ಮತದಾನದ ದಿನದವರೆಗೆ ಶಾಸಕರೊಂದಿಗೆ ಕರ್ನಾಟಕಕ್ಕೆ ಬಂದು ಇರುವುದಾಗಿ ಹೇಳಿದರು. ಅದಕ್ಕೆ ನಾವಿಲ್ಲಿ ವ್ಯವಸ್ಥೆ ಮಾಡಿದ್ದೇವೆ. ಕಾಂಗ್ರೆಸ್, ಬಿಜೆಡಿ ಹಾಗು ಕಮ್ಯುನಿಷ್ಟ್ ಪಕ್ಷದವರು ಸೇರಿ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ. ನಮ್ಮ ಅಭ್ಯರ್ಥಿ ಗೆದ್ದು ರಾಜ್ಯಸಭೆ ಪ್ರವೇಶಿಸಲಿದ್ದಾರೆ. ಈ ಗೆಲುವು ಇಂಡಿಯಾ ಮೈತ್ರಿ ಕೂಟಕ್ಕೆ ಬಲ ತುಂಬಲಿದೆ ಎಂದರು.

**ಡಿ.ಕೆ.ಶಿ. ಭೇಟಿಯಾದ ವೀರಪ್ಪನ್ ಪುತ್ರಿ**

ವಂಡರ್ ಲಾ ರೆಸಾರ್ಟ್‌ನಲ್ಲಿ ನೆಲೆಸಿರುವ ಒಡಿಶಾದ ಕಾಂಗ್ರೆಸ್ ಶಾಸಕರನ್ನು ಭೇಟಿ ಮಾಡಲು ಶುಕ್ರವಾರ ರೆಸಾರ್ಟ್‌ಗೆ ಬಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವೀರಪ್ಪನ್ ಪುತ್ರಿ ವಿದ್ಯಾ ವೀರಪ್ಪನ್ ಭೇಟಿ ಮಾಡಿದರು. ಶಿವಕುಮಾರ್ ಅವರು ರೆಸಾರ್ಟ್‌ಗೆ ಬರುವುದಕ್ಕೆ ಮುಂಚೆಯೇ ವಿದ್ಯಾ ಅವರು ತಮ್ಮ ಬೆಂಬಲಿಗರೊಂದಿಗೆ ಬಂದು ಕಾಯುತ್ತಾ ಕುಳಿತಿದ್ದರು. ಶಿವಕುಮಾರ್‌ಗೆ ಫೋಟೊ ನೀಡಿ ನಮಸ್ಕರಿಸಿದ ವಿದ್ಯಾ, ತಮ್ಮ ಬಗ್ಗೆ ಭೇಟಿ ಉದ್ದೇಶ ಹೇಳಲು ಮುಂದಾದರು. ಆಗ ಶಿವಕುಮಾರ್ ಅವರು ಆ ಮೇಲೆ ಮಾತನಾ ಡುವೆ ಎಂದು ಕೈ ಸನ್ನೆ ಮಾಡುತ್ತಾ, ರೆಸಾರ್ಟ್ ಒಳಕ್ಕೆ ಹೋದರು. ತಮಿಳುನಾಡಿನ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಇಂಗಿತ ವನ್ನು ವಿದ್ಯಾ ಅವರು ಹೊಂದಿದ್ದಾರೆ. ಆ ಕುರಿತು ಮಾತನಾಡಲು ಶಿವಕುಮಾರ್ ಭೇಟಿಗಾಗಿ ಬಂದಿದ್ದಾರೆ ಎನ್ನಲಾಗಿದೆ.

## ತಂಬಾಕು ಖರೀದಿಗೆ ಮುಂದಾದ ಕೇಂದ್ರ

» ಮೊದಲನೇ ಪುಟದಿಂದ

ರಾಯಭಾರಿಗಳಿಗೆ ಪತ್ರ ಬರೆದು ಮುಕ್ತ ಮಾರುಕಟ್ಟೆಯಲ್ಲಿ ತಂಬಾಕು ಖರೀದಿಗೆ ಕೋರಿಕೆ ಸಲ್ಲಿಸಲಾಗುವುದು. ಈವರೆಗೆ ರಫ್ತು ಮಾಡದಿರುವ ದೇಶಗಳಿಗೂ ತಂಬಾಕು ರಫ್ತು ಮಾಡುವ ಬಗ್ಗೆ ಕ್ರಮ ವಹಿಸಲಾಗುವುದೆಂದು ಕೇಂದ್ರ ವಾಣಿಜ್ಯ ಸಚಿವರು ಭರವಸೆ ನೀಡಿದ್ದಾರೆ. ತಂಬಾಕಿಗೆ ಬೆಂಬಲ ಬೆಲೆ ನೀಡಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡುತ್ತೇವೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಖರೀದಿ ನಿಲ್ಲಿಸಿರುವ ಪರಿಣಾಮದಿಂದ ತಂಬಾಕು ಬೆಲೆಯಲ್ಲಿ ಕುಸಿತ ಆಗಿದೆ. 320 ರೂ.ನಿಂದ 250 ರೂ. ವರೆಗೂ ಕುಸಿತ ಕಂಡಿದೆ. ಈ ಹಿನ್ನಲೆ ಗೋಯಲ್ ಅವರನ್ನು ಭೇಟಿಯಾಗಿ ಬೆಲೆ ಹೆಚ್ಚಿಸುವ ಮತ್ತು ಪರಿಹಾರ ನೀಡುವ ಬಗ್ಗೆ ಮನವಿ ಮಾಡಲಾಗಿದೆ. ಸೂಕ್ತವಾದ ಮಾರುಕಟ್ಟೆ ವ್ಯವಸ್ಥೆ ನೀಡಲು ಕೇಳಿದ್ದೇವೆ. ತಂಬಾಕು ಮಂಡಳಿಯಲ್ಲಿ ಉತ್ತಮ ಮೂಲ ಸೌಕರ್ಯಗಳು ಅಗತ್ಯವಾಗಿದ್ದು, ಅದರ ಬಗ್ಗೆಯೂ ಕೇಂದ್ರ ಸಚಿವರ ಗಮನ ಸೆಳೆಯಲಾಗಿದೆ ಎಂದು ಹೇಳಿದರು.

## ಮೆಗಾ ಡೇರಿ ಉದ್ಘಾಟನೆಗೆ ಆಗಮಿಸಲು ಪ್ರಧಾನಿ ಒಪ್ಪಿಗೆ

» ಮೊದಲನೇ ಪುಟದಿಂದ

ಮಂಜೂರಾಗಿತ್ತು. ಅದರಲ್ಲಿ 298 ಕೋ.ರೂ. ಬಿಡುಗಡೆಯಾಗಿದೆ. ಈಗಾಗಲೇ 88 ಕೋ.ರೂ. ಸಾಲ ತೀರಿಸಲಾಗಿದೆ. 2ನೇ ಹಂತದಲ್ಲಿ ಮತ್ತೆ 150 ಕೋ.ರೂ.ಸಾಲ ಮಂಜೂರಾಗಿದೆ. ಈ ಮೆಗಾ ಡೇರಿಯನ್ನು ರಾಜ್ಯ ಮತ್ತು ರಾಷ್ಟ್ರದಲ್ಲಿ ಮೊದಲ ಸ್ಥಾನಕ್ಕೇರಿಸಬೇಕೆಂದು ಶ್ರಮಿಸಲಾಗಿದೆ ಎಂದು ಹೇಳಿದರು.

ಥೀಮ್ ಪಾರ್ಕ್ ಯೋಜನೆ ಮೆಗಾ ಡೇರಿಯ ಪ್ರಮುಖ ಆಕರ್ಷಣೆಯಾಗಿದೆ. ಈ ಕಾಮಗಾರಿ ಎರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ರೈತರ ಮಕ್ಕಳು ಹಾಗು ಪ್ರವಾಸಿಗರಿಗೆ ಮುದ ನೀಡುವ ಡೇರಿ ಆವರಣವನ್ನು ಆಕರ್ಷಕ ಮತ್ತು ಪ್ರೇಕ್ಷಣೀಯ ಮಾಡಲು 70 ಕೋ.ರೂ. ವಿನಿಯೋಗ ಮಾಡಲಾಗಿದೆ. ವಾಟರ್ ಫಾಲ್, ಕೆಫೆಟೇರಿಯಾ, ಹೊರ ದೇಶದ ವ್ಯವಸ್ಥೆಯನ್ನು ಇಲ್ಲೂ ತರಲಾಗಿದೆ ಎಂದರು.

ಮೊದಲ ಹಂತದಲ್ಲಿ ಸುವಾಸಿತ ಹಾಲಿನ ಪೆಟ್‌ಬಾಟಲ್ ಘಟಕ ನಿರ್ಮಾಣ ಪೂರ್ಣಗೊಂಡಿದೆ. ಉತ್ಪಾದನಾ ಕಾರ್ಯ ಚಾಲ್ತಿಯಲ್ಲಿದೆ. ಯು.ಹೆಚ್.ಡಿ.ಘಟಕದ ಉತ್ಪಾದನಾ ಸಾಮರ್ಥ್ಯ ನಿತ್ಯ 2 ಲಕ್ಷ ಲೀಟರ್‌ನಿಂದ 4 ಲಕ್ಷ ಲೀಟರ್‌ಗಳಿಗೆ ವಿಸ್ತರಿಸುವ ಯೋಜನೆ, ಮೆಗಾಡೇರಿ ಆರಂಭಕ್ಕೂ ಮುನ್ನ ಟ್ರಯಲ್ ರನ್ ಕೆಲಸ ಶುರುವಾಗಿದ್ದು, ಒಂದೂವರೆ ತಿಂಗಳಲ್ಲಿ ಪೂರ್ಣ ಆಗಲಿದೆ ಎಂದರು.

ಡೇರಿ ನಿರ್ಮಾಣದ ಸಿವಿಲ್ ಕಾಮಗಾರಿಗಳು, ಯಂತ್ರೋಪಕರಣಗಳ ಪೂರೈಕೆ ಮತ್ತು ಅಳವಡಿಕೆ ಕಾರ್ಯಗಳು ಕೆಎಂಎಫ್ ವತಿಯಿಂದ ಕೈಗೊಳ್ಳಲಾಗಿದೆ. ಕಾಮಗಾರಿ ಗುಣಮಟ್ಟವನ್ನು ಲೋಕೋಪಯೋಗಿ ಇಲಾಖೆ ದೃಢೀಕರಣ ಮಾಡಬೇಕು.ಒಟ್ಟಾರೆ ಖರ್ಚು 900 ಕೋ.ರೂ.ಗೆ ತಲುಪಬಹುದೆಂದರು. ಒಕ್ಕೂಟದ ಎಂಡಿ ಮಹೇಶ್, ನಿರ್ದೇಶಕ ಹೊನ್ನವಳ್ಳಿ ಸತೀಶ್ ಇದ್ದರು.

**1.10 ಲಕ್ಷ ಜನರಿಗೆ ಆಕರ್ಷಕ ಉಡುಪು**

ಪ್ರಧಾನಿ ಆಗಮನ ಹಿನ್ನಲೆ ಶಿಷ್ಟಾಚಾರ ಪ್ರಕಾರ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ಮೆಗಾಡೇರಿ ನಾನು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದಲ್ಲೇ ನಿರ್ಮಾಣವಾಗುತ್ತಿದೆ. ಅಂದಿನ ಕಾರ್ಯಕ್ರಮ ದಲ್ಲಿ ಹಾಸನ ಹಾಲು ಒಕ್ಕೂಟದ 1.10 ಲಕ್ಷ ಮಹಿಳಾ ಹಾಗು ಪುರುಷ ಸದಸ್ಯರು ಒಂದೇ ರೀತಿಯ ವಸ್ತ್ರಧರಿಸಿ ಬರಬೇಕು. ಅಂದು ಹಬ್ಬದ ರೀತಿಯಲ್ಲಿ ಕಾರ್ಯಕ್ರಮ ಮಾಡಲು ಯೋಜಿಸಲಾಗಿದೆ. ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗುವುದೆಂದು ರೇವಣ್ಣ ತಿಳಿಸಿದರು.

# ದೇವಾಲಯಗಳಿಂದ ಭಕ್ತಿಯೊಂದಿಗೆ ಸಾಮಾಜಿಕ ಒಗ್ಗಟ್ಟು

## ಅಗಲಹಳ್ಳಿ ಆಂಜನೇಯಸ್ವಾಮಿ ದೇಗುಲ ನಿರ್ಮಾಣಕ್ಕೆ ಸ್ವರೂಪ್ ಭೂಮಿಪೂಜೆ

• ಪ್ರಜೋದಯ ವರದಿ

**ಹಾಸನ:** ದೇವಾಲಯಗಳು ಗ್ರಾಮೀಣ ಸಮಾಜದಲ್ಲಿ ಭಕ್ತಿಯ ಜೊತೆಗೆ ಸಾಮಾಜಿಕ ಒಗ್ಗಟ್ಟಿನ ಕೇಂದ್ರವಾಗಿವೆ. ಈ ಹಿನ್ನಲೆ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ದೇವಾಲಯಗಳ ಅಭಿವೃದ್ಧಿ ಮತ್ತು ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ತಾಲ್ಲೂಕಿನ ಅಗಲಹಳ್ಳಿಯಲ್ಲಿ ಆಂಜನೇಯಸ್ವಾಮಿ ದೇವಾಲಯ ನಿರ್ಮಾಣ ಕಾಮಗಾರಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಹಾಸನ ವಿಧಾನ ಸಭಾ ಕ್ಷೇತ್ರದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ಈಗಾಗಲೇ ಹಲವು ದೇವಾಲಯಗಳ ನಿರ್ಮಾಣ ಹಾಗು ಪುನರ್‌ನಿರ್ಮಾಣ ಕಾಮಗಾರಿಗಳು ನಡೆಯುತ್ತಿವೆ. ಭಕ್ತರಿಗೆ ಅನುಕೂಲವಾಗುವಂತೆ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಅಗಲಹಳ್ಳಿ ಸೇರಿ ಸುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿ ಗಳನ್ನು ಇನ್ನಷ್ಟು ವೇಗಗೊಳಿಸಲಾ ಗುವುದೆಂದು ಹೇಳಿದರು.



ಗ್ರಾಮದಲ್ಲಿ ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೂ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಗ್ರಾಮಸ್ಥರ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದೆಂದು ಭರವಸೆ ನೀಡಿದರು.

ಗ್ರಾಮಸ್ಥರ ಬಹುದಿನಗಳ ಕನಸಾಗಿದ್ದ ದೇವಾಲಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇ ರಿದ ಹಿನ್ನಲೆ ಗ್ರಾಮದಲ್ಲಿ ಸಂಭ್ರಮದ ವಾತಾವರಣ ಕಂಡುಬಂದಿತು. ಸ್ಥಳೀಯ ಗ್ರಾಮ ಮುಖಂಡರು, ಸಮಿತಿ ಸದಸ್ಯರು, ಪಕ್ಷದ ಕಾರ್ಯಕರ್ತರು ಹಾಗು ಗ್ರಾಮಸ್ಥರು ಉಪಸ್ಥಿತರಿದ್ದರು.

### ಜೀವನ ಸಾಗಿಸಲು ಪರದಾಟ | ಗಮನ ಹರಿಸುವಂತೆ ಆಗ್ರಹ

# ಆಟೋ ಗ್ಯಾಸ್ ಕೊರತೆ: ಸಂಕಷ್ಟದಲ್ಲಿ ಚಾಲಕರು

• ಪ್ರಜೋದಯ ವರದಿ

**ಹಾಸನ:** ಅಡುಗೆ ಅನಿಲ ಕೊರತೆ ಒಂದೆಡೆಯಾದರೆ, ಮತ್ತೊಂದೆಡೆ ಆಟೋ ಎಲ್‌ಪಿಜಿ, ಸಿಎನ್‌ಜಿ ಗ್ಯಾಸ್ ಸಿಗದೆ ಆಟೋ ಚಾಲಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಗ್ಯಾಸ್ ಸರಬರಾಜು ಸ್ಥಗಿತಗೊಂಡಿರುವುದರಿಂದ ಚಾಲಕರು ದಿನನಿತ್ಯದ ಜೀವನ ಸಾಗಿಸಲು ಪರದಾಡುವಂತಾಗಿದೆ.

ನಗರದ ಬಿ.ಕಾಟೀಹಳ್ಳಿ ಪ್ರದೇಶದಲ್ಲಿರುವ ಹೆಚ್.ಪಿ.ಆಟೋ ಗ್ಯಾಸ್ ಬಂಕ್‌ನಲ್ಲಿ ಗ್ಯಾಸ್ ಲಭ್ಯವಿಲ್ಲದೆ ಚಾಲಕರು ಹಾಗು ಬಂಕ್ ಮಾಲೀಕರು ಸಮಸ್ಯೆ ಎದುರಿಸುತ್ತಿದ್ದಾರೆ. ಗ್ಯಾಸ್ ಕೊರತೆಯ ಹಿನ್ನಲೆ ಕೆಲ ಸಂದರ್ಭಗಳಲ್ಲಿ ಚಾಲಕರು ಮತ್ತು ಬಂಕ್ ಮಾಲೀಕರ ನಡುವೆ ವಾಗ್ವಾದವೂ ಉಂಟಾಗಿದೆ. ಸರ್ಕಾರಿ ಸ್ವಾಮ್ಯದ ಗ್ಯಾಸ್ ಕಂಪನಿಯಿಂದ ನಿಗದಿತ ದರದಲ್ಲಿ ದೊರೆಯುತ್ತಿದ್ದ ಆಟೋ ಗ್ಯಾಸ್ ಈಗ ಸಿಗದೆ ಇರುವುದ ರಿಂದ ಚಾಲಕರು ಖಾಸಗಿಯಾಗಿ ದುಬಾರಿ ಬೆಲೆಯಲ್ಲಿ ಗ್ಯಾಸ್ ಖರೀದಿಸು ವಂತಾಗಿದೆ. ಹೀಗಾಗಿ ಆಟೋ ಚಾಲಕರ ಆದಾಯಕ್ಕೂ ದೊಡ್ಡ ಹೊಡೆತ ಬಿದ್ದಿದೆ.

**ಬಂಕ್ ಮಾಲೀಕರ ಅಸಹಾಯಕತೆ**

ಈಗಾಗಲೇ ಮುಂಗಡ ಹಣ ಪಾವತಿಸಿ ಗ್ಯಾಸ್ ಬುಕ್ ಮಾಡಿದ್ದರೂ ಕಂಪನಿಯಿಂದ ಸರಬರಾಜು ಆಗುತ್ತಿಲ್ಲ. ದೂರವಾಣಿ ಕರೆ ಮಾಡಿದರೂ ಕಂಪನಿ ಯವರು ಪ್ರತಿಕ್ರಿಯೆ ನೀಡುವುದಿಲ್ಲ. ಸೇಲ್ಸ್ ಆಫೀಸರ್ ಬರುವಾಗಲೇ ಸಮಸ್ಯೆ ತಿಳಿಸಲು ಸಾಧ್ಯವಾಗುತ್ತಿದೆ. ಬೇರೆ ಯಾರನ್ನೂ ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲವೆಂದು ಗ್ಯಾಸ್ ಬಂಕ್ ಮಾಲೀಕರು ಅಸಹಾಯಕತೆ ವ್ಯಕ್ತ ಪಡಿಸಿದ್ದಾರೆ.

ಆಟೋ ಚಾಲಕರು ಮಾತನಾಡಿ, ಗ್ಯಾಸ್ ಇಲ್ಲದೆ ಆಟೋಗಳು ರಸ್ತೆಗೆ ಇಳಿಯುತ್ತಿಲ್ಲ. ದಿನಕ್ಕೆ ದುಡಿದು ಮನೆ ನಡೆ ಸುವ ನಮ್ಮಂತಹವರಿಗೆ ಇದು ದೊಡ್ಡ ಹೊಡೆತವಾಗಿದೆ. ಮನೆ



ಬಾಡಿಗೆ ಕಟ್ಟಲು, ಮಕ್ಕಳಿಗೆ ಶಿಕ್ಷಣ ಕೊಡಲು ಹಾಗು ಔಷಧಿ ತರುವುದಕ್ಕೂ ಹಣವಿ ಲ್ಲದ ಪರಿಸ್ಥಿತಿ ಬಂದಿದೆ. ಕೋವಿಡ್ ಸಮಯದಿಂದಲೇ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಆಟೋ ಚಾಲ ಕರಿಗೆ ಇದೀಗ ಗ್ಯಾಸ್ ಕೊರತೆ ಮತ್ತೊಂದು ಸಮಸ್ಯೆಯಾಗಿ ಪರಿಣಮಿಸಿದೆ. ಒಂದು ಟ್ಯಾಂಕರ್‌ನಲ್ಲಿ ಸುಮಾರು 30 ಸಾವಿರ ಲೀಟರ್ ಗ್ಯಾಸ್ ಬರುತ್ತದೆ. ಬೆಲೆ ಸ್ವಲ್ಪ ಹೆಚ್ಚಿಸಿದರೂ ಲಕ್ಷಾಂತರ ಲಾಭ ಸಾಧ್ಯ. ಹಾಗಿದ್ದರೂ ಸರಬರಾಜು ಏಕೆ ಆಗುತ್ತಿಲ್ಲ ಎಂಬುದು ಅರ್ಥವಾಗುತ್ತಿಲ್ಲವೆಂದು ಚಾಲಕರು ಪ್ರಶ್ನಿಸಿದರು.

ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಹಾಗು ಗ್ಯಾಸ್ ಕಂಪನಿಯವರು ಸಮಸ್ಯೆ ಪರಿಹರಿಸಿ ಆಟೋ ಚಾಲಕರ ಸಂಕಷ್ಟ ನಿವಾರಿಸಬೇಕು. ಜಿಲ್ಲಾಡಳಿತ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

# ಪ.ಬಂಗಾಳ ಚುನಾವಣೆ: ಐದು ಅಭಿವೃದ್ಧಿ ಮಂಡಳಿ ಘೋಷಣೆ

• ಪ್ರಜೋದಯ ವರದಿ



**ಕೋಲ್ಕತ್ತಾ:** ರಾಜ್ಯದ ಐದು ಸಮುದಾಯಗಳಿಗೆ ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗುವುದೆಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶುಕ್ರವಾರ ಘೋಷಿಸಿದ್ದಾರೆ.

ಏಪ್ರಿಲ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೂ ಮುನ್ನ ಈ ಘೋಷಣೆ ಮಾಡಿರುವ ಮಮತಾ, ಹೊಸದಾಗಿ ಸ್ಥಾಪನೆಯಾಗುವ ಐದು ಮಂಡಳಿಗಳು ಸಾಂಪ್ರದಾಯಿಕ ಹಕ್ಕು ಕಾಪಾಡುತ್ತವೆ ಮತ್ತು ಈ ಸಮುದಾಯಗಳ ಸಾಮಾಜಿಕ ಆರ್ಥಿಕ ಬೆಳವಣಿಗೆಯನ್ನು ಖಾತರಿಪಡಿಸುತ್ತವೆ ಎಂದಿದ್ದಾರೆ.

ಮುಂಡಾ, ಕೋರಾ (ಪರಿಶಿಷ್ಟ ಪಂಗಡ), ಡೋಮ (ಪರಿಶಿಷ್ಟ ಜಾತಿ), ಕುಂಭಕಾರ್, ಸದ್‌ಗೋಪ್ (ಇತರೆ ಹಿಂದುಳಿದ ವರ್ಗ) ಸಮುದಾಯಗಳಿಗೆ ನಮ್ಮ ಸರ್ಕಾರವು ಶೀಘ್ರದಲ್ಲೇ ಸಾಂಸ್ಕೃತಿಕ ಮತ್ತು ಅಭಿವೃದ್ಧಿ ಮಂಡಳಿ ಸ್ಥಾಪಿಸಲು ಉದ್ದೇಶಿಸಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಉಲ್ಲೇಖಿಸಿದ್ದಾರೆ.

2013ರಿಂದಲೂ ನಮ್ಮ ಸರ್ಕಾರವು ದುರ್ಬಲ ಸಮುದಾಯದವರಿಗಾಗಿ ಇಂತಹ ಮಂಡಳಿ ಗಳನ್ನು ಸ್ಥಾಪಿಸಿದ್ದು, ಅವರ ಸರ್ವತೋಮುಖ ಅಭಿವೃದ್ಧಿಯನ್ನು ಖಾತರಿಪಡಿಸಿದೆ ಎಂದು ಹೇಳಿದ್ದಾರೆ.

ಯಾವೊಂದು ಸಮುದಾಯವೂ ಹಿಂದುಳಿಯದಂತೆ ನೋಡಿಕೊಳ್ಳುವುದು ನಮ್ಮ ಬದ್ಧತೆ. ಎಲ್ಲರ ಮೊಗದಲ್ಲೂ ನಗು ಮೂಡುವಂತೆ ಮಾಡುವ ಸಂಕಲ್ಪ ನಮ್ಮ ಸರ್ಕಾರದ್ದಾಗಿದೆ ಎಂದಿದ್ದಾರೆ.

## ಯುವ ಸೇನಾ ಫೌಂಡೇಶನ್‌ನಿಂದ ಸ್ವಚ್ಛತಾ ಕಾರ್ಯ



**ಹಾಸನ:** ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ ಸ್ಥಾಪಿತವಾಗಿರುವ ಯುವ ಸೇನಾ ಫೌಂಡೇಶನ್ ಪದಾಧಿಕಾರಿಗಳು ಶುಕ್ರವಾರ ಸಕಲೇಶಪುರ ತಾಲ್ಲೂಕಿನ ಬಿಸಿಲೆ ಘಾಟ್ ಸಮೀಪದ ಗಡಿ ಚಾಮುಂಡೇಶ್ವರಿ ದೇವಾಲಯ ಸುತ್ತಲು ಶ್ರಮದಾನ ಮಾಡುವ ಮೂಲಕ ಸ್ವಚ್ಛತೆಯ ಸಂದೇಶ ಸಾರಿದರು.

ನಿತ್ಯ ನೂರಾರು ವಾಹನಗಳು ಓಡಾಡುವ ರಸ್ತೆಯ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕವರ್, ನೀರಿನ ಬಾಟಲಿ, ತಟ್ಟೆ, ಲೋಟಗಳು ಬಿದ್ದಿರುವುದನ್ನು ಅರಿತ ಫೌಂಡೇಶನ್‌ನ ಸದಸ್ಯರು ಬೆಳಿಗ್ಗೆಯಿಂದಲೇ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದರು. ದೇವಾಲಯಕ್ಕೆ ಬರುವ ಭಕ್ತಾದಿಗಳು ಎಸೆದ ತ್ಯಾಜ್ಯವನ್ನು ಸಂಗ್ರಹಿಸಿ ಟಿಪ್ಪರ್‌ಗೆ ತುಂಬಿಸಿ ತ್ಯಾಜ್ಯ ವಿಲೇವಾರಿ ಘಟಕಕ್ಕೆ ನೀಡಿದರು.

ಯುವ ಸೇನಾ ಫೌಂಡೇಶನ್ ಅಧ್ಯಕ್ಷ ಪ್ರಭುಗೌಡ, ಉಪಾಧ್ಯಕ್ಷ ಚೇತನ್, ಖಜಾಂಚಿ ಜಗದೀಶ್, ಟ್ರಸ್ಟಿ ಸೋಮು, ನಿರ್ದೇಶಕರಾದ ಮದನ್, ಹರೀಶ್ ಹಾಗು ಅರಣ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

# ನಾಳೆ ಉಳ್ಳಾವಳ್ಳಿಯಲ್ಲಿ ಪೌರಾಣಿಕ ನಾಟಕ ಪ್ರದರ್ಶನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಒತ್ತಡದ ಬದುಕಿನ ನಡುವೆ ಸಮಯ ಮಾಡಿಕೊಂಡು ತರಬೇತಿ ಪಡೆದು ಗ್ರಾಮಸ್ಥರೇ ಅಭಿನಯಿಸಿರುವ ಪೌರಾಣಿಕ ನಾಟಕ ತಾಲ್ಲೂಕಿನ ಉಳ್ಳಾವಳ್ಳಿ ಗ್ರಾಮದಲ್ಲಿ ಮಾ.15 ರಂದು ಪ್ರದರ್ಶನ ಕಾಣಲಿದೆ.

ಶ್ರೀ ಭೈರವೇಶ್ವರ ಸ್ವಾಮಿ ಹಬ್ಬದ ಪ್ರಯುಕ್ತ ನಾಟಕ ಪ್ರದರ್ಶನವಾಗಲಿದ್ದು, ಅದಕ್ಕಾಗಿ ಸಕಲ ಸಿದ್ಧತೆಗಳು ನಡೆದಿವೆ. ಒಂದು ಶತಮಾನಕ್ಕೂ ಹಿಂದಿನ ಪರಂಪರೆಯನ್ನು ಇಂದಿಗೂ ಸಹ ಭಕ್ತಿ-ಭಾವದಿಂದ ಸೌಹಾರ್ದತೆಯ ಸಂಕೇತವಾಗಿ ಕಲಾ ಪ್ರದರ್ಶನವನ್ನು ಶ್ರೀ ಭೈರವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಮಾಡಿಕೊಂಡು ಬರುತ್ತಿದೆ. ಹಿರಿಯರ ಮಾರ್ಗದರ್ಶನದಲ್ಲಿ 30ಕ್ಕೂ ಹೆಚ್ಚು ಯುವಕರ ತಂಡ ಬಣ್ಣ ಹಚ್ಚುತ್ತಿದೆ. ದಿ||ರಂಗಶೆಟ್ಟಿ, ದಿ||ಕೃಷ್ಣೇಗೌಡ, ದಿ||ಸೀನಪ್ಪ, ದಿ||ತಿಮ್ಮೇಗೌಡ, ದಿ|| ಬಸವರಾಜು, ದಿ||ಚಂದ್ರು ಅವರಿಂದ ಬಳುವಳಿಯಾಗಿ ನಾಟಕ ಕಲೆ ಬಂದಿದೆ. ಗ್ರಾಮದ ರೈತರು, ಯುವಕರು, ಕಾರ್ಮಿಕರು, ವ್ಯಾಪಾರಿಗಳು, ಆಟೋ ಕಾರು-



ಚಾಲಕರು, ವಿದ್ಯಾರ್ಥಿಗಳು, ಬಣ್ಣ ಹಚ್ಚಲಿದ್ದಾರೆ.

ಗ್ರಾಮದ ದಿ||ಕಲ್ಲಳ್ಳಿ ನಿಂಗೇಗೌಡ ಅವರು ಹಾರ್ಮೋನಿಯಂ ವಾದ್ಯ ವಿದ್ಯೆಯನ್ನು ಊರ ಕಲಾವಿದರಿಗೆ ಧಾರೆ ಎರೆದಿದ್ದಾರೆ. ಅದರಂತೆ ಇಂದಿಗೂ ಸಹ ಗ್ರಾಮದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ. ಪೂರ್ವಜರು ಮಹಾಭಾರತ, ರಾಮಾಯಣ ಸೇರಿ ವಿವಿಧ ಪೌರಾಣಿಕ ನಾಟಕಗಳನ್ನು ಮಾಡುತ್ತಿದ್ದರು ಎಂದು ಹಿರಿಯರಾದ ತಮ್ಮಯ್ಯಣ್ಣ ಹೇಳುತ್ತಾರೆ. ಚನ್ನರಾಯಪಟ್ಟಣ ತಾಲ್ಲೂಕು ನೇರಲಕೆರೆ ಗ್ರಾಮದ ಪೌರಾಣಿಕ ನಾಟಕಗಳ ಮಹಿಳಾ ಸಂಗೀತ ನಿರ್ದೇಶಕಿ ಸವಿತಾ ಕುಮಾರ್ ಅವರ ನಿರ್ದೇಶನದಲ್ಲಿ ನಾಟಕ ಪ್ರದರ್ಶನಗೊಳ್ಳಲಿದೆ.

ಮಾ.15 ರಂದು ಗ್ರಾಮದಲ್ಲಿ ಶ್ರೀ ಭೈರವೇಶ್ವರ ಸ್ವಾಮಿಯ ಹಬ್ಬ ಹಾಗು ಜಾತ್ರಾ ಮಹೋತ್ಸವ ನಡೆಯಲಿದೆ. ಶ್ರೀ ಭೈರವೇಶ್ವರ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಗ್ರಾಮಸ್ಥರ ಸಹಕಾರದೊಂದಿಗೆ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶನ ಮಾಡಲಿದ್ದು, ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕಲಾವಿದ ಹೆಚ್.ಎಸ್. ಮಹೇಶ್ ಅವರು ಕೋರಿದ್ದಾರೆ.

# ಅಗ್ರಹಾರ ಬೆಳಗುಲಿ ಕೇಶವೇಶ್ವರ ದೇಗುಲದಲ್ಲಿ ಶ್ರಮದಾನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಲಾ ಸೌಂದರ್ಯ ಮತ್ತು ಸಾಂಸ್ಕೃತಿಕ ವೈಭವದ ಸಂಕೇತವಾಗಿರುವ ಪುರಾತನ ದೇವಾಲಯಗಳನ್ನು ಜೋಪಾನವಾಗಿ ಮುಂದಿನ ತಲೆಮಾರಿನ ಜನರಿಗೆ ತಲುಪಿಸುವ ಮಹತ್ವದ ಜವಾಬ್ದಾರಿ ನಮ್ಮದಾಗಿದೆ ಎಂದು ಜಿಲ್ಲಾ ಐತಿಹಾಸಿಕ ಸ್ಮಾರಕಗಳ ಸಂರಕ್ಷಣಾ ವೇದಿಕೆ ಸಂಚಾಲಕ ಟಿ.ವಿ.ನಟರಾಜ ಪಂಡಿತ್ ಅವರು ಹೇಳಿದರು.

ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ಅಗ್ರಹಾರ ಬೆಳಗುಲಿ ಗ್ರಾಮದಲ್ಲಿ ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿ ಹಾಸನ ಟರ್ಮಿನಲ್ ವತಿಯಿಂದ ನಡೆದ ಶ್ರೀ ಕೇಶವೇಶ್ವರ ದೇವಾಲ ಯದ ಸ್ವಚ್ಛತಾ ಕಾರ್ಯದಲ್ಲಿ ಮಾತನಾಡಿದ ಅವರು, ಸಾಕಷ್ಟು ವೈವಿಧ್ಯತೆ ಹೊಂದಿರುವ ದೇವಾಲಯ ಪುರಾತತ್ವ ಇಲಾಖೆ ವ್ಯಾಪ್ತಿಗೆ ಒಳಪಟ್ಟರೂ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ವಿಷಾದನೀಯ. ಈ ಸಂಬಂಧ ಸಂಸದ ಶ್ರೇಯಸ್ ಪಟೇಲ್ ಹಾಗು ಶಾಸಕ ಸಿ.ಎನ್.ಬಾಲಕೃಷ್ಣ ಅವರನ್ನು ಭೇಟಿಯಾಗಿ ದೇಗುಲ ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಬೇಕಿದೆ ಎಂದರು.



ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಯ ಹಾಸನ ಟರ್ಮಿನಲ್ ಪ್ರಧಾನ ವ್ಯವಸ್ಥಾಪಕ ಪ್ರಕಾಶ್ ಅವರು ಮಾತನಾಡಿ, ಐತಿಹಾಸಿಕ ದೇವಾಲಯ ಮತ್ತು ಕಲ್ಯಾಣಿ, ಜಲ ಮೂಲಗಳನ್ನು ಸಂರಕ್ಷಿಸುವುದು ಸಂಸ್ಥೆಯ ಸೇವಾ ಕಾರ್ಯವಾಗಿದೆ. ಕ್ರಿ.ಶ.1210ರಲ್ಲಿ ಈ ದೇವಾಲಯ ನಿರ್ಮಾಣವಾಗಿದ್ದು, 737 ವರ್ಷಗಳ ಇತಿಹಾಸ ಹೊಂದಿದೆ. ಹೊಯ್ಸಳರ ದೊರೆ 2ನೇ ವೀರ ಬಲ್ಲಾಳನ ದಂಡನಾಯಕನಾಗಿದ್ದ ಕೇಶಿ ರಾಜನಿಂದ ನಿರ್ಮಿತವಾದ ದೇವಾಲಯವನ್ನು ಸ್ವಚ್ಛ ಮಾಡಿರುವ ಹೆಮ್ಮೆ ನಮ್ಮದಾಗಿದೆ ಎಂದರು. ಹಿಮ್ಸ್‌ನ ಡಾ||ಜಗದೀಶ್, ಡಾ||ಉದಾಸಿ ಮಠ, ಸೃಜನ್‌ಗೌಡ ಮಾತನಾಡಿದರು. ಅರ್ಚಕ ರಾಮಪ್ರಸಾದ್ ಇದ್ದರು.

# ಶ್ರೀ ವೀರಭದ್ರಸ್ವಾಮಿ ದೇವಾಲಯ ನಿರ್ಮಾಣಕ್ಕೆ ಶಂಕುಸ್ಥಾಪನೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಕಸಬಾ ಹೋಬಳಿ ಮಳ್ಳೇನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರೆಲ್ಲ ಕೂಡಿ 14 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ಗುದ್ದಲಿ ಪೂಜೆ ನೆರವೇರಿಸಿ ಶೀಘ್ರ ದೇವಸ್ಥಾನ ನಿರ್ಮಾಣವಾಗಿ ಗ್ರಾಮಸ್ಥರಿಗೆ ಸ್ವಾಮಿ ದರ್ಶನ ಭಾಗ್ಯ ಸಿಗಲಿ ಎಂದು ಹಾರೈಸಿದರು.

ಗ್ರಾಮದ ಮಧ್ಯಭಾಗದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಶಂಕುಸ್ಥಾಪನಾ ಕಾರ್ಯದಲ್ಲಿ ಗುಡಿಭಟ್ಟರ ಕುಟುಂಬಸ್ಥರಿಂದ ಶಾಸ್ತ್ರೋಕವಾಗಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎ.ಸಿ.ಆನಂದ್‌ಕುಮಾರ್, ಕಾಂಗ್ರೆಸ್ ಯುವ ಮುಖಂಡ ವಿನೋದ್ ಮಕಾನ್ ಪೂಜಾಕಾರ್ಯದಲ್ಲಿ ಭಾಗಿಯಾಗಿ ದೇವಸ್ಥಾನಕ್ಕೆ ಅಡಿಗಲ್ಲು ಇಟ್ಟು ಪೂಜೆ ಸಲ್ಲಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹರೀಶ್ ಅವರು ಮಾತನಾಡಿ, ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಗ್ರಾಮದ ಪರಿಶಿಷ್ಟ ಸಮುದಾಯದ ಜನರು ಪ್ರತಿ ಮನೆಗಿಷ್ಟು ಎಂಬುದಾಗಿ ಕ್ರೋಢಿಕರಿಸಿದ್ದಾರೆ. ಅದರೊಂದಿಗೆ ಗ್ರಾಮದ ಹಿರಿಯರು, ಇತರೆ ಸಮುದಾಯದವರು ಸೇರಿ 13.5 ಲಕ್ಷ ರೂ. ಕ್ರೋಢಿಕರಿಸಲಾಗಿದೆ. ಮುಜರಾಯಿ ಇಲಾಖೆಯಡಿ ತಹಶೀಲ್ದಾರ್ ಅನುದಾನ ಕೊಡಿಸುವ ಭರವಸೆ ನೀಡಿದ್ದಾರೆ. ಇನ್ನೊಂದು ವರ್ಷದಲ್ಲಿ ದೇವಸ್ಥಾನ ನಿರ್ಮಿಸಿಕೊಡುವ ಭರವಸೆಯನ್ನು ಗುತ್ತಿಗೆದಾರ ರವಿಕುಮಾರ್ ಹೇಳಿದ್ದು, ಅದಕ್ಕೆ ಪೂರಕವಾಗಿ ಗ್ರಾಮಸ್ಥರು ಹೆಚ್ಚಿನ ಸಹಕಾರ ನೀಡಿ ದೇವಸ್ಥಾನದ ಉದ್ಘಾಟನೆಗೆ ಮುಂದಾಗುವಂತೆ ಮನವಿ ಮಾಡಿದರು.

ಮುಖಂಡರಾದ ಸುಬ್ಬಣ್ಣ, ಜಯರಾಮ್, ಕುಶಣ್ಣ, ರಾಜು, ರಂಗಸ್ವಾಮಿ, ಸುರೇಶ್, ಶಿವು, ತಾಲ್ಲೂಕು ಕಛೇರಿ ಕಾಂತರಾಜು ಇತರರು ಇದ್ದರು.

## ಈಜು ಸ್ಪರ್ಧೆ: ವಿದ್ಯಾರ್ಥಿನಿ ಅದ್ವಿಕ ಗೌಡ ಸಾಧನೆ



• ಪ್ರಜೋದಯ ವರದಿ

**ಹಾಸನ:** ನಗರದ ಮಿಲೇನಿಯಮ್ ವರ್ಲ್ಡ್ ಶಾಲೆಯ ಒಂದನೇ ತರಗತಿ ವಿದ್ಯಾರ್ಥಿನಿ ಅದ್ವಿಕ ಗೌಡ ಅವರು ರಾಜ್ಯ ಮಟ್ಟದ ಈಜು ಸ್ಪರ್ಧೆಯಲ್ಲಿ ಒಟ್ಟು 28 ಪದಕ, 1 ಟ್ರೋಫಿ, 28 ಪ್ರಮಾಣ ಪತ್ರ ಪಡೆದು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆಗೆ ಪಾತ್ರರಾಗಿದ್ದಾರೆ.

ಎಸ್.ಕೆ. ಅಕಾಡೆಮಿ ತರಬೇತುದಾರ ಸೈಯದ್ ಅವರು ತರಬೇತಿ ನೀಡಿದ್ದರು. ವಿದ್ಯಾರ್ಥಿ ಸಾಧನೆಗೆ ಶಾಲೆಯ ಪ್ರಾಂಶುಪಾಲ, ಶಿಕ್ಷಕರು ಹಾಗು ಪೋಷಕರು ಅಭಿನಂದಿಸಿದ್ದಾರೆ.

## ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದರೆ ಹಾಲಿನ ಸಹಾಯ ಧನ ಹೆಚ್ಚಳ

» ಮೊದಲನೇ ಪುಟದಿಂದ

**ವಿಮಾ ಸೌಲಭ್ಯದ ಉಪಯೋಗಕ್ಕೆ ಸಲಹೆ**

2025-26 ನೇ ಸಾಲಿಗೆ 60 ಸಾವಿರ ರಾಸುಗಳನ್ನು ರಾಸು ವಿಮಾ ಯೋಜನೆಗೆ ಒಳಪಡಿಸಲು ಯೋಜಿಸಿದ್ದು, ಈ ವರೆಗೆ 15,035 ರಾಸುಗಳಿಗೆ ವಿಮಾ ಪ್ರೀಮಿಯಂ ಮೊತ್ತ ರಾಸುವಿನ ಮೌಲ್ಯದ ಶೇ.1.76 ರಂತೆ 1.71 ಕೋ.ರೂ.ಪಾವತಿಸಲಾಗಿದೆ. ಒಕ್ಕೂಟ ಮತ್ತು ಹಾಮೂಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ 1.03 ಕೋ.ರೂ. ಅನುದಾನ ನೀಡಲಾಗಿದ್ದು, ಇಲ್ಲಿಯವರೆಗೆ 74 ರಾಸುಗಳು ಮರಣ ಹೊಂದಿದ್ದು, 44 ರಾಸುಗಳಿಗೆ 23.75 ಲ ರೂ.ವಿಮಾ ಪರಿಹಾರದ ಮೊತ್ತವು ಉತ್ಪಾದಕರಿಗೆ ದೊರಕಿರುತ್ತದೆ. ಉತ್ಪಾದಕರು ರಾಸು ವಿಮಾ ಸೌಲಭ್ಯದ ಉಪಯೋಗವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆದುಕೊಳ್ಳಬೇಕಿದೆ ಎಂದು ಅಧಿಕಾರಿಗಳು ತಿಳಿಸಿದರು.

**ಏಕರೂಪ ತಂತ್ರಾಂಶ**

ಏಕರೂಪ ತಂತ್ರಾಂಶದಲ್ಲಿ ಕೆಎಂಎಫ್ ನಿರ್ದೇಶನದಂತೆ ಒಕ್ಕೂಟದ ವ್ಯಾಪ್ತಿಯ 1665 ಸಂಘಗಳಲ್ಲಿ ಎನ್‌ಡಿಡಿಬಿ ಅವರು ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಅಳವಡಿಸಿದ್ದು. ಇದರಿಂದ ಉತ್ಪಾದಕರಿಗೆ ಹಾಲು ಹಾಕಿದ ಕೂಡಲೇ ಗುಣಮಟ್ಟದ ಫಲಿತಾಂಶ ದೊರೆಯುತ್ತಿದೆ ಹಾಗೂ ಸಂಘದ ಕಾರ್ಯನಿರ್ವಹಣೆಗೆ ಈ ತಂತ್ರಾಂಶ ಅಳವಡಿಕೆ ಸಹಾಯಕವಾಗಿದೆ. ಈ ತಂತ್ರಾಂಶವನ್ನು ಒಕ್ಕೂಟದ ಎಲ್ಲಾ ಸಂಘಗಳಲ್ಲಿ ಅಳವಡಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ನಿರ್ದೇಶಕರಾದ ಹೊನ್ನವಳ್ಳಿ ಸತೀಶ್, ರಾಮಚಂದ್ರೇಗೌಡ, ಚನ್ನೇಗೌಡ, ಜಗದೀಶ್, ಹೇಮಂತ್ ಕುಮಾರ್, ಲಿಂಗಾರಾಜು, ಬಸವರಾಜು, ವಸಂತಾ, ಆಶಾ ಮತ್ತಿತರರಿದ್ದರು.

## ಹಾರ್ಮುಜ್ ಜಲಸಂಧಿ ಸಂಪೂರ್ಣ ಬಂದ್ ಮಾಡಿಲ್ಲ: ಇರಾನ್

• ಪ್ರಜೋದಯ ವರದಿ



**ನವದೆಹಲಿ:** ಇರಾನ್ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಬಂದ್ ಮಾಡಿಲ್ಲ. ಪಶ್ಚಿಮ ಏಷ್ಯಾದಲ್ಲಿನ ಪ್ರಸ್ತುತ ಪರಿಸ್ಥಿತಿಯಿಂದಾಗಿ ಹಡಗುಗಳು ಹಾರ್ಮುಜ್ ಮೂಲಕ ಹಾದು ಹೋಗಲು ಸಾಧ್ಯವಾಗುತ್ತಿಲ್ಲವೆಂದು ಭಾರತದಲ್ಲಿರುವ ಇರಾನ್ ಸರ್ವೋಚ್ಚ ನಾಯಕನ ಪ್ರತಿನಿಧಿ ಡಾ.ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಅವರು ಶುಕ್ರವಾರ ಹೇಳಿದ್ದಾರೆ.

ನಮ್ಮ ದೇಶವು ಹಾರ್ಮುಜ್ ಜಲಸಂಧಿಯನ್ನು ಮುಚ್ಚುವುದನ್ನು ಎಂದಿಗೂ ಬಯಸಿಲ್ಲ ಮತ್ತು ಕೆಲವು ಹಡಗುಗಳು ಇನ್ನೂ ಹೋಗುತ್ತಿವೆ. ವಿಶ್ವದ ನಾಯಕರು ನಮ್ಮ ದೇಶದ ವಿರುದ್ಧದ ಯುದ್ಧವನ್ನು ನಿಲ್ಲಿಸುವಂತೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೇಲೆ ಒತ್ತಡ ಹೇರಬೇಕೆಂದು ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ತೈಲ ಬೆಲೆ ಏರಿಕೆಯಿಂದ ಪ್ರಪಂಚದಾದ್ಯಂತ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇರಾನ್ ಹಾರ್ಮುಜ್ ಜಲಸಂಧಿಯನ್ನು ಮುಚ್ಚಿಲ್ಲ. ಅದು ತೆರೆದಿರುತ್ತದೆ. ಆದರೆ ಪ್ರಸ್ತುತ ಪರಿಸ್ಥಿತಿ ಮತ್ತು ಸಂದರ್ಭಗಳಿಂದಾಗಿ ಹಡಗುಗಳು ಹಾರ್ಮುಜ್ ಮೂಲಕ ಹಾದುಹೋಗಲು ಸಾಧ್ಯ ವಾಗುತ್ತಿಲ್ಲ. ಇಲ್ಲದಿದ್ದರೆ ಇರಾನ್ ಜಲಸಂಧಿಯನ್ನು ಮುಚ್ಚಲು ಅಥವಾ ನಿರ್ಬಂಧಿಸಲು ಎಂದಿಗೂ ಬಯಸುವುದಿಲ್ಲ. ಕೆಲವು ಇನ್ನೂ ಹಾದು ಹೋಗುತ್ತಿವೆಯೆಂದು ಅವರು ತಿಳಿಸಿದ್ದಾರೆ.

ಯುದ್ಧವನ್ನು ಪ್ರಾರಂಭಿಸಿದವರೇ ನಿಲ್ಲಿಸಬೇಕು. ಈ ಅನ್ಯಾಯದ ಯುದ್ಧವನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಬೇಕೆಂದು ಹೇಳಿದ್ದಾರೆ.

## ಗಾಂಜಾ ಸೇವಿಸಿದ್ದ ಮೂವರ ಬಂಧನ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿವಿಧೆಡೆ ಪ್ರತ್ಯೇಕ ಪ್ರಕರಣಗಳಲ್ಲಿ ಗಾಂಜಾ ಸೇವನೆ ಮಾಡಿದ್ದ ಮೂವರನ್ನು ಬಂಧಿಸಲಾಗಿದೆ. ಚನ್ನರಾಯಪಟ್ಟಣ ತಾಲ್ಲೂಕು ಅಕ್ಕನಹಳ್ಳಿ ಕೂಡು ರಸ್ತೆಯಲ್ಲಿ ನುಗ್ಗೇಹಳ್ಳಿ ಪೊಲೀಸರು ಗಸ್ತು ತಿರುಗುತ್ತಿದ್ದಾಗ ವ್ಯಕ್ತಿಯೊಬ್ಬನನ್ನು ಸಂಶಯದಡಿ ವಿಚಾರಿಸಿದಾಗ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಬಿ.ಎನ್. ಅನಿಲ್ ಎಂಬಾತ ಆರೋಪಿಯಾಗಿದ್ದು, ಬಂಧಿಸಲಾಗಿದೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ರಾಮನಾಥಪುರ ತೂಗು ಸೇತುವೆ ಬಳಿ ಗಾಂಜಾ ಸೇವಿಸಿ ಓಡಾಡಿಕೊಂಡಿದ್ದ ಭರತ್ ಹಾಗು ಆನಂದನ್ ಎಂಬುವವರನ್ನು ಕೊಣನೂರು ಠಾಣೆ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

## ಮನೆ ಬೀಗ ಮುರಿದು 1.45 ಲಕ್ಷ ರೂ. ಕಳವು

• ಪ್ರಜೋದಯ ವರದಿ

**ಹಾಸನ:** ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಹಿಂಬಾಗಿಲ ಮೂಲಕ ನುಗ್ಗಿದ್ದ ಕಳ್ಳರು ಬೀರುವಿನಲ್ಲಿಟ್ಟಿದ್ದ 1.45 ಲಕ್ಷ ರೂ. ಕಳವು ಮಾಡಿರುವ ಘಟನೆ ಇಲಾಹಿ ನಗರದಲ್ಲಿ ನಡೆದಿದೆ.

ನಿವಾಸಿ ತೌಸಿಫ್ ಅವರು ಗುರುವಾರ ಮಧ್ಯಾಹ್ನ ಮನೆಗೆ ಬೀಗ ಹಾಕಿ ಕಾರು ರಿಪೇರಿಗೆಂದು ತೆರಳಿದ್ದರು. ಖಚಿತ ಮಾಹಿತಿ ಮೇರೆಗೆ ಹಿಂಬಾಗಿಲಿನಿಂದ ಬಂದಿರುವ ಕಳ್ಳರು ಬೀರುವಿನ ಬೀಗ ಮುರಿದು ಕೃತ್ಯ ಎಸಗಿದ್ದಾರೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK